ಕರಾವಳಿ ತರಂಗಿಣಿ

ಕಡಲ ಕಿನಾರೆಯಿಂದ ಕೆಂಪು ಕೋಟೆಯವರೆಗೆ..

ಕನ್ನಡ ವಾರಪತ್ರಿಕೆ

PRGI No: KNKAN/25/A2498 www.karavalitharangini.com KARAVALI THARANGINI KANNADA Weekly Dakshina Kannada ದಿನಾಂಕ: 30-10-2026 to 05-11-2026 ಬೆಲೆ:10-00 ಸಂಪುಟ–2 ಸಂಚಿಕೆ–05 ಪುಟಗಳು–6



ಕರಾವಳಿ ಮೂಲದ ಪ್ರತಿಭಾನ್ವಿತ ಯುವಕ ಫ್ಲೈಟ್ ಲೆಫ್ಟಿನೆಂಟ್ ಪ್ರಜ್ವಲ್ ಆರ್. ಶೆಟ್ಟಿ, ಭಾರತೀಯ ವಾಯುಪಡೆಯ ಅತ್ಯಾಧುನಿಕ ರಫೇಲ್ ಯುದ್ಧವಿಮಾನದ ಕಾರ್ಯಾಚರಣಾ ಪೈಲಟ್ ಆಗಿ ಆಯ್ಕೆಯಾಗಿ ನಾಡಿಗೆ ಕೀರ್ತಿ ತಂದಿದ್ದಾರೆ. ಎನ್‌ಡಿಎಯಲ್ಲಿ ಶ್ರೇಷ್ಠ ಸಾಧನೆ ಮಾಡಿರುವ ಇವರು, ವಾರಾಣಸಿಯ 'ವಿಂಗ್ಸ್ ಓವರ್ ಗಂಗೇಸ್' ಪ್ರದರ್ಶನದಲ್ಲಿ ರಫೇಲ್‌ನ 'ನೀಲಕಂಠ' ರಚನೆಯಲ್ಲಿ ಪ್ರಮುಖ ನಾಯಕತ್ವ ವಹಿಸಿ ಯುವಜನತೆಗೆ ಮಾದರಿಯಾಗಿದ್ದಾರೆ.

ಕಾಂಗ್ರೆಸ್ ಸರಕಾರದ ಅಹಂಕಾರಕ್ಕೆ ಕಪಾಳಮೋಕ್ಷ: ಎಚ್‌ಡಿಕೆ

ಬೆಂಗಳೂರು: ವಿಧಾನ ಪರಿಷತ್ ಶಿಕ್ಷಕರ ಹಾಗೂ ಪದವೀಧರ ಕ್ಷೇತ್ರಗಳ ಚುನಾವಣಾ ಫಲಿತಾಂಶವು ಆಡಳಿತಾರೂಢ ಕಾಂಗ್ರೆಸ್ ಸರಕಾರದ ದುರಾಡಳಿತ, ರೈತ ವಿರೋಧಿ ಧೋರಣೆ ಹಾಗೂ ಭ್ರಷ್ಟ ನೀತಿಗಳಿಗೆ ಮತದಾರರು ನೀಡಿರುವ ನೇರ ಕಪಾಳಮೋಕ್ಷ ಎಂದು ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ವಾಗ್ದಾಳಿ ನಡೆಸಿದ್ದಾರೆ. ನವದೆಹಲಿಯಲ್ಲಿ ಮಾಧ್ಯಮ ಪ್ರತಿನಿಧಿಗಳೊಂದಿಗೆ ಮಾತನಾಡಿದ ಅವರು, ಎನ್‌ಡಿಎ ಮೈತ್ರಿಕೂಟದ ನಾಲ್ಕೂ ಅಭ್ಯರ್ಥಿಗಳ ಜಯವು ಮುಂದಿನ ದಿನಗಳಲ್ಲಿ ರಾಜ್ಯದಲ್ಲಿ ಬಿಜೆಪಿ–ಜೆಡಿಎಸ್ **3ನೇ ಪುಟಕ್ಕೆ**

ಮತದಾರರ ತೀರ್ಮಾನ ಗೌರವಿಸುತ್ತೇವೆ: ಡಿ ಕೆ ಶಿವಕುಮಾರ್

ಬೆಂಗಳೂರು: ವಿಧಾನ ಪರಿಷತ್ ಚುನಾವಣೆಯಲ್ಲಿ ಮತದಾರರು ಕೊಟ್ಟಿರುವ ಸಂದೇಶವನ್ನು ಕೂಲಂಕುಷವಾಗಿ ಅಧ್ಯಯನ ಮಾಡಿ ಸರಿಪಡಿಸಿಕೊಳ್ಳುತ್ತೇವೆ ಎಂದು ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ತಿಳಿಸಿದ್ದಾರೆ. ಸದಾಶಿವನಗರ ನಿವಾಸದ ಬಳಿ ಮಾಧ್ಯಮದವರಿಗೆ ಪ್ರತಿಕ್ರಿಯೆ ನೀಡಿದ ಅವರು, ಬೆಂಗಳೂರು ಶಿಕ್ಷಕರ ಕ್ಷೇತ್ರದ ಫಲಿತಾಂಶ ನಿರೀಕ್ಷಿಸಿರಲಿಲ್ಲ. ವಿಧಾನಪರಿಷತ್ ಪದವೀಧರರ ಹಾಗೂ ಶಿಕ್ಷಕರ ಕ್ಷೇತ್ರಗಳ ಚುನಾವಣೆಯಲ್ಲಿ ಮತದಾರರು ಕೊಟ್ಟಿರುವ ತೀರ್ಮಾನವನ್ನು ಗೌರವದಿಂದ ಸ್ವೀಕಾರ ಮಾಡುತ್ತೇವೆ. ಕಾಂಗ್ರೆಸ್‌ಗೆ ಎರಡು ಸ್ಥಾನಗಳು ಬರುವ ನಿರೀಕ್ಷೆಯಿತ್ತು, ಅದಾಗಿಲ್ಲ. ನಮ್ಮ ಪಕ್ಷ ಸೋತಿದ್ದರೂ ಮತಗಳು ಚೆನ್ನಾಗಿಯೇ ಬಂದಿವೆ. **3ನೇ ಪುಟಕ್ಕೆ**

ಮುಂದಿನ ಬಾರಿ ರಾಜ್ಯದಲ್ಲಿ ಎನ್‌ಡಿಎ ಸರ್ಕಾರ: ಬಿ.ವೈ.ವಿ

ಮೈಸೂರು: ರಾಜ್ಯದಲ್ಲಿ ಬ್ಯಾಲೆಟ್ ಪೇಪರ್ ಬಳಸಿ ಮಾಡಿದ ಚುನಾವಣೆಯಲ್ಲಿ ಕೂಡ ಕಾಂಗ್ರೆಸ್ ಸೋತಿದೆ. ಮುಂದಿನ ಬಾರಿ ರಾಜ್ಯದಲ್ಲಿ ಎನ್‌ಡಿಎ ಸರ್ಕಾರ ಬರುವುದು ಖಚಿತ ಎಂದು ಮೈಸೂರಿನಲ್ಲಿ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ವಿಶ್ವಾಸ ವ್ಯಕ್ತಪಡಿಸಿದರು. ನಗರದ ಖಾಸಗಿ ಹೋಟೆಲ್‌ನಲ್ಲಿ ಮಾತನಾಡಿದ ಅವರು, ಕಳೆದ ಅಕ್ಟೋಬರ್ 23ರಂದು ವಿಧಾನ ಪರಿಷತ್ ಚುನಾವಣೆ ನಡೆಯಿತು. 4 ಕ್ಷೇತ್ರಗಳಲ್ಲಿ ಎನ್‌ಡಿಎ ಅಭ್ಯರ್ಥಿಗಳು ಗೆದ್ದಿದ್ದಾರೆ. ಆಗ್ನೇಯ ಪದವೀಧರ ಕ್ಷೇತ್ರದಲ್ಲಿ ನಮ್ಮ ಅಭ್ಯರ್ಥಿ 23 ಸಾವಿರ **3ನೇ ಪುಟಕ್ಕೆ**

ಸಂಪಾದಕೀಯ

ಕರಾವಳಿ ತರಂಗಿಣಿ

ಬದುಕಿಗೆ ವಿನಯವೆಂಬುದೇ ಆಭರಣವಾಗಿರಲಿ...

– ಲಲಿತಶ್ರೀ ಪ್ರೀತಮ್ ರೈ

ಅತಿ ವಿನಯಂ ದೂರ್ತ ಲಕ್ಷಣಂ ಎನ್ನುವ ಮಾತನ್ನು ನಮ್ಮ ಹಿರಿಯರು ಹೇಳುತ್ತಾ ಬಂದಿದ್ದಾರೆ. ಅದಕ್ಕೆ ಹಲವಾರು ಕಾರಣಗಳಿದ್ದಿರಬಹುದು. ನಮ್ಮ ಹಿರಿಯರು ಹೇಳಿರುವ ಪ್ರತಿ ಬುದ್ಧಿವಾದದ ಮಾತಿನಲ್ಲೂ ಅವರ ಅನುಭವದ ಸಾರವಾದಗಳೇ ಹೇಳಿದವೆ ಎಂದರೆ ತಪ್ಪಾಗಲಾರದು. ಹೌದು ಕೆಲವರು ಅತೀ ವಿನಯವಂತರರಾಗಿ ಮಾತನಾಡಿದಾಗ ನಮ ಬುದ್ಧಿಯ ಚಿತ್ರಣ ಕಣ್ಣ ಮುಂದೆ ಮಿಂಚಿ ಮರೆಯಾಗುವುದುಂಟು. ಆದರೆ ವಿನಯದಿಂದಿರುವುದು ತಪ್ಪೇ ಎನ್ನುವ ಪ್ರಶ್ನೆ ನೀವು ನನ್ನನ್ನು ಕೇಳಬಹುದು. ಖಂಡಿತಾ ಇಲ್ಲ ಮನುಷ್ಯ ಎಂದೆಂದಿಗೂ ವಿನಯವಂತನಾಗಿರಬೇಕು. ಹೌದು ದುರಹಂಕಾರ ಎಂಬುದು ಗಡಸು. ಅದನ್ನು ಯಾರು ಎಲ್ಲಿಯೂ ಇಷ್ಟ ಪಡಲ್ಲ. ಆದರೆ ವಿನಮ್ರತೆ ಎಂಬುದು ಹಾಗಲ್ಲ. ಅದು ತುಂಬಾ ಮೃದು. ಅದು ಎಲ್ಲರಿಗೂ ಇಷ್ಟವಾಗುವಂತದ್ದು. ಜೀವನದ ಪ್ರಶಾಂತತೆಯನ್ನು, ಸೌಂದರ್ಯವನ್ನು ಅನುಭವಿಸಬೇಕಾದರೆ ನಿಮ್ಮಲ್ಲಿ ವಿನಮ್ರತೆ ಅತ್ಯಗತ್ಯವಾಗಿ ಇರಲೇಬೇಕು. ವಾಸ್ತವವಾಗಿ ವಿನಮ್ರತೆ ಎನ್ನುವುದು ಒಂದು ಮಿತಿಯಲ್ಲಿರುವ ಅಭಿಮಾನ, ಗೌರವವನ್ನು ಪ್ರತಿಪಾದಿಸುತ್ತದೆ. ವಿನಮ್ರತೆಯು ನಮ್ಮ ಮುಂದೆ ಬರಬಹುದಾದ ಅಥವಾ ಬರುವ ಪ್ರತಿಕೂಲ ಶಕ್ತಿಗಳನ್ನು ಎದುರಿಸುವ ಶಕ್ತಿಯನ್ನು ತರುತ್ತದೆ. ನಮ್ಮಲ್ಲಿ ವಿನಮ್ರತೆಯೊಂದಿದ್ದರೆ ನಮ್ಮ ದಾರಿಗೆ ಅಡ್ಡವಾಗಿ ಒಂದು ಪರ್ವತವೇ ಬಂದು ನಿಂತರೂ ಅದನ್ನು ಬಳಸಿಕೊಂಡು ಹೋಗಿ ನಿಮ್ಮ ದಾರಿಯನ್ನು ಸುಗಮಗೊಳಿಸಿಕೊಳ್ಳಬಹುದು. ಹೌದು ಎಂತಹ ಪರಿಸ್ಥಿತಿಗೂ ಕುಗ್ಗದೆ ಮುನ್ನಡೆಯುವ ವ್ಯಕ್ತಿಗಳು ನಮ್ಮ ಮುಂದೆಯೇ ಇರುವುದನ್ನು ನಾವು ನೋಡಿದ್ದೇವೆ. ವಿನಮ್ರವಾಗಿರುವ ವ್ಯಕ್ತಿಯ ಚಟುವಟಿಕೆಗಳಲ್ಲಿ ಯಾವುದೇ ಗದ್ದಲ, ಆಡಂಬರವಿರುವುದಿಲ್ಲ. ವಿನಯವಂತನಾಗಿರುವ ಮನುಷ್ಯನಲ್ಲಿ ಯಾವುದೇ ಸ್ವಾರ್ಥ ಕಾಣುವುದಿಲ್ಲ. ಅಂತವರು ಗಂಭೀರವಾಗಿರುತ್ತಾರೆ. ಅನಾವಶ್ಯಕ ಮಾತನಾಡುವುದಿಲ್ಲ. ಇನ್ನೊಬ್ಬರನ್ನು ಯಾವಾಗಲೂ, ಯಾವುದೇ ಕಾರಣಕ್ಕೂ ನೋಯಿಸುವ ಕೆಲಸ ಮಾಡುವುದಿಲ್ಲ. ಇನ್ನೊಬ್ಬರು ಮಾಡುವ ಎಲ್ಲಾ ಒಳ್ಳೆಯ ಕೆಲಸಗಳನ್ನು ಪ್ರೋತ್ಸಾಹಿಸುತ್ತಾರೆ. ವಿನಮ್ರವಾಗಿರುವುದು ಒಂದು ಅತ್ಯಮೂಲ್ಯ ಸದ್ಗುಣವಾಗಿದೆ. ಕೆಲವರ ವಿನಮ್ರತೆ ಹೇಗಿರುತ್ತದೆಯೆಂದರೆ ಕಾರ್ಯವಾಸಿ ಕತ್ತೆ ಕಾಲನ್ನಾದರೂ ಹಿಡಿಯುವಂತವರಿರುತ್ತಾರೆ. ಅಂತವರಿಂದ ಯಾವಾಗಲೂ ಅಪಾಯವೇ. ಅದಕ್ಕಾಗಿ ಅಂತವರನ್ನು ಎಷ್ಟು ದೂರ ಇರುತ್ತೀವೋ ಅಷ್ಟು ಒಳ್ಳೆಯದು. ಯಾಕೆಂದರೆ ಅವರ ಕೆಲಸ ಸಾಧನೆಯ ಬಳಿಕ ತನ್ನ ಬುದ್ಧಿ ತೋರಿಸುತ್ತಾರೆ. ನಿಜವಾದ ವಿನಯವಂತ ತನ್ನನ್ನು ತಾನು ಹೊಗಳಿಕೊಳ್ಳುವುದಿಲ್ಲ. ಸ್ವಯಂ ಪ್ರಚಾರದ ಮೊದಲು ಇತರರಿಗೆ ಪ್ರಾಮುಖ್ಯತೆಯನ್ನು ನೀಡುತ್ತಾನೆ. ಎಲ್ಲಿಯೂ ತನ್ನನ್ನು ತಾನು ಶ್ರೇಷ್ಠ ಎಂದು ಪ್ರತಿಬಿಂಬಿಸಲಾರ. ಯಾವಾಗಲೂ ತನ್ನನ್ನು ತಾವು ಅರ್ಥ ಮಾಡಿಕೊಳ್ಳುವವರಿಗೆ ಯಾವುದೇ ಸಂಕೋಚವಿರುವುದಿಲ್ಲ. ಅದು ಅವರ ಆತ್ಮದ ಶುದ್ಧತೆಯನ್ನು ತೋರಿಸುತ್ತದೆ. ತನ್ನನ್ನು ತಾನು ಅರ್ಥ ಮಾಡಿಕೊಂಡ ಜನರು ಎಂದಿಗೂ ಕೀಳರಿಮೆಯನ್ನು ಅನುಭವಿಸುವುದಿಲ್ಲ ಆದರೆ ಪ್ರತಿ ಸಮಯದಲ್ಲಿ ಕಲಿಯುತ್ತಲೇ ಇರುತ್ತಾರೆ. ವಿನಯವಂತರಾಗಲು ಬಯಸುವ ಪ್ರತಿ ಮನುಷ್ಯ ತನ್ನಲ್ಲಿರುವ ಅಸೂಯೆಯನ್ನು ತೊಡೆದು ಹಾಕಬೇಕು. ಮನುಷ್ಯನ ಹೃದಯ ಪ್ರೀತಿ ಮತ್ತು ಕಾಳಜಿಯಿಂದ ತುಂಬಿರಬೇಕೆಂದು ನಮ್ಮ ಮಹಾನಿಯರು ಆಗಾಗ ತಿಳಿಸಿಕೊಟ್ಟಿದ್ದಾರೆ. ಯಾರಲ್ಲಿ ನಾನು ನನ್ನದು ಎನ್ನುವ ಅಹಂಭಾವ ಇರುವುದೋ ಅಂತವನು ಯಾರ ಬಗ್ಗೆಯೂ ಒಳ್ಳೆಯದನ್ನು ಯೋಚಿಸಲಾರ. ಇನ್ನೊಬ್ಬರ ಬಗ್ಗೆ ಅಸೂಯೆ ಪಟ್ಟಾಗ ವಿನಮ್ರತೆಯ ಬಾಗಿಲು ಮುಚ್ಚುತ್ತದೆ ಎನ್ನುವುದನ್ನು ಮರೆಯಬಾರದು ಅಸೂಯೆ ಎನ್ನುವುದು ಮರದಲ್ಲಿರುವ ಹುಳದಂತೆ ಎಂದು ಆಗಾಗ ನಮ್ಮ ಅಜ್ಜ ಹೇಳುತ್ತಿದ್ದರು. ಯಾಕೆಂದರೆ ಮರದಲ್ಲಿರುವ ಹುಳಕ್ಕೆ ಮರವೇ ಆಹಾರ. ಅದನ್ನು ತಿಂದೇ ಅದು ಬದುಕುತ್ತದೆ. ಹಾಗೆ ಮನುಷ್ಯನಲ್ಲಿರುವ ಅಸೂಯೆ ಎಂಬ ಕೆಟ್ಟ ಗುಣ ಮನುಷ್ಯನ ಆವನತಿಗೆ ಕಾರಣವಾಗುತ್ತದೆ. ಕೃತಜ್ಞತೆಯು ಮಾನವನನ್ನು ವಿನಮ್ರನನ್ನಾಗಿ ಮಾಡುವ ಮತ್ತೊಂದು ಲಕ್ಷಣವೆನ್ನಬಹುದು. ಈ ಭೂಮಿ ಮೇಲೆ ಜೀವ ನೀಡಿದ ದೇವರಿಗೆ ಕೃತಜ್ಞತೆ ಸಲ್ಲಿಸುವುದು ಬಹು ಮುಖ್ಯ. ನಾವು ಪಡೆದ ಪ್ರತಿ ಸಹಾಯಕ್ಕೂ ಕೃತಜ್ಞರಾಗಿರಬೇಕು. ಅದಕ್ಕೆ ನಮ್ಮ ಹಿರಿಯರು ಉಪ್ಪು ತಿಂದ ಮನೆಗೆ ದ್ರೋಹ ಮಾಡಬಾರದು ಎಂದು ಹೇಳುತ್ತಿದ್ದರು. ಎಲ್ಲಿಯೂ ನಾವು ತಿನ್ನುವ ಆಹಾರದಲ್ಲಿರುವ ಆಕ್ಕಿಯ ಕಾಳಿನ ಹಿಂದೆ ಅನೇಕರ ಶ್ರಮವಿದೆ. ಆದ್ದರಿಂದ ಅವರೆಲ್ಲರ ಬಗ್ಗೆ ಕೃತಜ್ಞತಾ ಭಾವ ಹೊಂದಿರಬೇಕು. ಅಂತಹ ಕೃತಜ್ಞತಾ ಭಾವ ಮನುಷ್ಯನ ಅನುಭವದಲ್ಲಿ ಚಿಕ್ಕ ಸಹಾಯವನ್ನು ಮರೆಯಬಾರದು ಎನ್ನುವುದು ಅವರ ಉಪದೇಶವಾಗಿತ್ತು. ಸ್ವಾರ್ಥವು ಮಾನವನ ಮತ್ತೊಂದು ನಕಾರಾತ್ಮಕ ನಡವಳಿಕೆಯಾಗಿದ್ದು ನಾವು ವಿನಮ್ರ ಮನುಷ್ಯನಾಗಿರ್ಬೇಕಾದರೆ ಸ್ವಾರ್ಥ ನಮ್ಮ ಹತ್ತಿರ ಸುಳಿಯಬಾರದು. ಸ್ವಾರ್ಥ ಎಲ್ಲಿರುವುದೋ ಅಲ್ಲಿ ವಿನಮ್ರತೆ ಮಾಯವಾಗಿರುತ್ತದೆ. ಕೃತಜ್ಞತಾ ಭಾವವುಳ್ಳವ ವ್ಯಕ್ತಿಯು ಕ್ರಮೇಣ ಕಲಿಯುವಿಕೆಯನ್ನು ಬೆಳೆಸಿಕೊಳ್ಳುತ್ತಾನೆ. ಕೃತಜ್ಞತೆಯು ಅರ್ಥಪೂರ್ಣವಾಗಿರುತ್ತದೆ. ಕೃತಜ್ಞತೆ ಮತ್ತು ಕ್ಷಮೆ ಎರಡು ಸೇರಿ ಒಂದೇ ನಾಣ್ಯದ ಎರಡು ಮುಖಗಳು ಎನ್ನಬಹುದು. ಹೀಗೆ ವಿನಯದ ಜೊತೆ ಜೊತೆ ಕೃತಜ್ಞತೆ, ಕ್ಷಮೆ, ಸಹಾಯದಂತಹ ಹಲವಾರು ಸ್ವಭಾವಗಳು ಜೊತೆಗೂಡುತ್ತವೆ. ಇದು ಮನುಷ್ಯನನ್ನು ಸರಿಯಾದ ದಾರಿಯಲ್ಲಿ ಮುನ್ನಡೆಸುತ್ತದೆ. ಇದಲ್ಲದಿದ್ದಲ್ಲಿ ನಮ್ಮ ಮುಂದಿನ ಪೀಳಿಗೆಗೆ ತಿಳಿ ಹೇಳುತ್ತಾ ಮುನ್ನಡೆದು ಅವರಿಗೆ ದಾರಿ ದೀಪವಾಗೋಣ...

ಸಂಪ್ರದಾಯ

ಕೇಸರಿ ಹಬ್ಬ

ಕುಂಕುಮ ಕೇಸರಿ ಆಚರಿಸುವ ಕಲ್ಪನೆಯು ಮೊಘಲರ ಕಾಲಕ್ಕೆ ಸೇರಿದೆ. ಇತಿಹಾಸದ ಪ್ರಕಾರ, ಈ ಹಬ್ಬವನ್ನು ಕಾಶ್ಮೀರ ದೊರೆ ಯೂಸುಫ್ ಶಾಹಿ ಚಾಕ್ ಆಳ್ವಿಕೆಯಲ್ಲಿ ಆಚರಿಸಲಾಯಿತು. ಅದರ ನಂತರ ಅದನ್ನು ಪ್ರವಾಸೋದ್ಯಮವಾಗಿ ಸರ್ಕಾರವು ಪುನರಾರಂಭಿಸಿತು. ಕೇಸರಿ ಕೃಷಿಯ ಪಾಂಪೋರ್‌ನ ಸ್ಥಳೀಯರ ಮುಖ್ಯ ಉದ್ಯೋಗವಾಗಿದೆ. ಪಾಂಪೋರ್‌ನ ಸಂಪ್ರದಾಯ ಉದ್ಯಮ ಮತ್ತು ಆಚರಣೆ ನೇರವಾಗಿ ಈ ಪ್ರಮುಖ ಮಸಾಲೆ ಉತ್ಪಾದನೆ ಅಥವಾ ವ್ಯಾಪಾರದಲ್ಲಿ ತೊಡಗಿಸಿಕೊಂಡಿದೆ ಮತ್ತು ಅವರ ಸಂಪೂರ್ಣ ಜೀವನವು ಕೇಸರಿಯ ಸುತ್ತ ತಿರುಗುತ್ತದೆ. ನವೆಂಬರ್ ಮೊದಲ ದಿನಗಳಲ್ಲಿ, ಕೇಸರಿ ಸುಗ್ಗಿಯ ಸಮಯದಲ್ಲಿ ಪಾಂಪೋರ್ ತನ್ನ ವಾರ್ಷಿಕ ಕೇಸರಿ ಹಬ್ಬವನ್ನು ಆಚರಿಸುತ್ತದೆ. ಈ ಸಂದರ್ಭದಲ್ಲಿ ಇಡೀ ನಗರವು ಕಾಶ್ಮೀರದ ಕುಂಡ್, ಭಂಡ್ ಮತ್ತು ದುಮ್ಹಾಲ್ ಎಂಬ ಜಾನಪದ ನೃತ್ಯಗಳನ್ನು ಒಳಗೊಂಡಿರುವ ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಅಪಾರ ಉತ್ಸಾಹ ಮತ್ತು ವಿನೋದದಿಂದ ಕೇಸರಿ ಕೊಯ್ಲನ್ನು ಆಚರಿಸುತ್ತದೆ. ಕಾಶ್ಮೀರಿ ಕಣಿವೆಯ ಸಾಂಪ್ರದಾಯಿಕ ಚಹಾವಾದ 'ಕಹ್ವಾ'ದಲ್ಲಿ ಅದನ್ನು ತಯಾರಿಸುವ ಮೂಲಕ ಕೇಸರಿ ರುಚಿಯನ್ನು ಅನುಭವಿಸುವ ಅತ್ಯುತ್ತಮ ಮಾರ್ಗವಾಗಿದೆ. ಈ ಎಂಟು ದಿನಗಳ ಹಬ್ಬವನ್ನು ಕೇಸರಿ ಬೆಳೆಗಾರರ ಸಂಘದ ಜೊತೆಗೆ ಪಾಂಪೋರ್‌ನಲ್ಲಿ ಕೇಸರಿಯ ಕೆಲಸ ಮೈದಾನದಲ್ಲಿ ಆಚರಿಸಲಾಗುತ್ತದೆ. ವಿವಿಧ ಸ್ಥಳಗಳಲ್ಲಿ ಕುಂಕುಮದ ಪ್ರದರ್ಶನಗಳು ಮತ್ತು ಮಕ್ಕಳ ಮಾರಾಟವಿದೆ. ಈ ಉತ್ಸವದ ವ್ಯವಸ್ಥೆಗೆ ಮುಖ್ಯ ಕಾರಣವೆಂದರೆ ಕಾಶ್ಮೀರ ಕಣಿವೆಯಲ್ಲಿ ಹಲವಾರು ಕಡೆಗಳಲ್ಲಿ ಪ್ರವಾಸಿಗರನ್ನು ಹೆಚ್ಚಿಸುವುದು. ಈ ಉತ್ಸವಗಳು ಪ್ರವಾಸಿಗರ ಗಮನವನ್ನು ಸೆಳೆಯುತ್ತವೆ. ಸಾಂಸ್ಕೃತಿಕ ಕಾರ್ಯಕ್ರಮಗಳೊಂದಿಗೆ ಸಾಂಪ್ರದಾಯಿಕ ನೃತ್ಯಗಳನ್ನು ಕೇಸರಿ ಕ್ಷೇತ್ರಗಳ ಹೃದಯಭಾಗದಲ್ಲಿ ಆಯೋಜಿಸಲಾಗುತ್ತದೆ. ಅಕ್ಟೋಬರ್‌ನಿಂದ ನವೆಂಬರ್ ತಿಂಗಳವರೆಗೆ ಕೇಸರಿ ಹೂವುಗಳು ಅರಳುತ್ತವೆ. ಕೇಸರಿ ವಿಶ್ವದ ಅತ್ಯಂತ ದುಬಾರಿ ಗಿಡಮೂಲಿಕೆ ಉತ್ಪನ್ನಗಳಲ್ಲಿ ಒಂದಾಗಿದೆ.

ವೈದ್ಯೋನಾರಾಯಣೋ ಹರಿಃ

ಮತ್ಸ್ಯಾಕ್ಷಿ

ಸಂಸ್ಕೃತದಲ್ಲಿ ಮತ್ಸ್ಯಾಕ್ಷಿ ಎಂದು ಕರೆಯಲಾಗುವ ಹೊನಗೊನ್ನೆ ಸೊಪ್ಪು ಗದ್ದೆ ಬಯಲಿನಲ್ಲಿ ಮತ್ತು ಕೆರೆದಂಡೆಗಳಲ್ಲಿ ಯಥೇಚ್ಛವಾಗಿ ಬೆಳೆಯುತ್ತದೆ. ಇದನ್ನು ಸೊಪ್ಪು ತರಕಾರಿಯಂತೆ ಕೆಲವು ಕಡೆ ಬಳಸುತ್ತಾರೆ. ಗಿಡವು ಕವಲೊಡೆದು ನೆಲದ ಮೇಲೆ ಹರಡಿ ಬೆಳೆಯುತ್ತದೆ. ಬೇರುಗಳು ಮೊಳಕು ಕಾಂಡವನ್ನು ನೆಲಕ್ಕೆ ಭದ್ರಪಡಿಸುತ್ತವೆ. ಕಾಂಡದ ಮೇಲೆ ರೋಮರಹಿತವಾದ, ನೀಳವಾದ, ಸರಳವಾದ ಮತ್ತು ಹೊಳಪಾದ ಎಲೆಗಳು ಅಭಿಮುಖವಾಗಿ ಜೋಡಣೆಯಾಗಿರುತ್ತವೆ. ಇದು ಒಂದು ಔಷಧೀಯ ಸಸ್ಯವಾಗಿದೆ. ಕೆಲವು ಪದ್ಧತಿಗಳಲ್ಲಿ ಇಂದಿಗೂ ಹಲವಾರು ಕಾಯಿಲೆಗಳಿಗೆ ಔಷಧಿಯಾಗಿ ಉಪಯೋಗಿಸುತ್ತಾರೆ.

ಹೊನಗೊನ್ನೆ ಸೊಪ್ಪಿನ ಪಲ್ಯ ಮಾಡಿ ತಿನ್ನುವುದರಿಂದ, ಇದು ಪಿತ್ತ ನಾಶಕ ರುಚಿಕಟ್ಟು ಬಾಯಿಗೆ ರುಚಿಯನ್ನು ಮಾಡುತ್ತದೆ.

ಹೊನಗೊನ್ನೆ ಸೊಪ್ಪಿನ ರಸ ಮತ್ತು ಹಾಲು ಸೇರಿಸಿ ಕುಡಿದರೆ ಕಣ್ಣಿನ ಉರಿ ಶಮನವಾಗುತ್ತದೆ ಮತ್ತು ಕಣ್ಣಿನ ದೃಷ್ಟಿ ಹೆಚ್ಚಾಗುತ್ತದೆ. ಹೊನಗೊನ್ನೆ ಸೊಪ್ಪಿನ ರಸ ಸಮ ಪ್ರಮಾಣದಲ್ಲಿ ಮಿಶ್ರ ಮಾಡಿ ಸ್ವಲ್ಪ ಸೈಂಧವ ಲವಣ ಸೇರಿಸಿ ಕುಡಿಯುವುದರಿಂದ ಮೂಲವ್ಯಾಧಿ ಕಡಿಮೆಯಾಗುತ್ತದೆ. ಹೊನಗೊನ್ನೆ ಗಿಡದ ಎಲೆಗಳ ಜೊತೆ ಅರಿಶಿನ ಹಾಗು ಗಾಡ ಕರ್ಪೂರ ಸೇರಿಸಿ ನಯವಾಗಿ ಅರೆದು ಮುಲಾಮಿನಂತೆ ಮಾಡಿಕೊಂಡು ಎಲ್ಲಾ ಬಗೆಯ ಗಾಯಗಳಿಗೆ ಲೇಪನವಾಗಿ ಬಳಸಬಹುದು.

ಹೊನಗೊನ್ನೆ ಬೇರಿನ ರಸಕ್ಕೆ ಸ್ವಲ್ಪ ಬೆಲ್ಲ ಹುಷ್ಟ ಸೇರಿಸಿ, ಸ್ತ್ರೀಯರು ಕುಡಿಯುವುದರಿಂದ ರಕ್ತಸ್ರಾವ ಗುಣವಾಗುತ್ತದೆ. ಇದನ್ನು ದಿನಕ್ಕೊಮ್ಮೆ ಯಂತೆ 3 ದಿವಸ ಕುಡಿಯಬೇಕು.

ಹೊನಗೊನ್ನೆ ಬೇರನ್ನು ಆಡಿನ ಹಾಲಿನಲ್ಲಿ ಅರೆದು ಕುಡಿಯುವುದರಿಂದ ಬಹುಮೂತ್ರ ರೋಗ ವಾಸಿಯಾಗುತ್ತದೆ. ಮಕ್ಕಳಲ್ಲಿ ಕಾಣಿಸುವ ಉದುಮುತ್ತಕ್ಕೂ ಇದು ಒಳ್ಳೆಯ ಔಷಧಿ. ಹೊನಗೊನ್ನೆ ಬೇರನ್ನು ಆಡಿನ ಹಾಲಿನಲ್ಲಿ ಅರೆದು ಸೋಸಿ ದಿವಸಕ್ಕೊಮ್ಮೆ ಕುಡಿಸುವುದರಿಂದ ಮೂತ್ರವಿಸರ್ಜನೆ ಸರಿಯಾಗುತ್ತದೆ. ಹಿಂದಿನ ಕಾಲದಲ್ಲಿ ಈ ಸೊಪ್ಪಿನ ರಸದಲ್ಲಿ ಉತ್ತರಾಣಿ ಬೇರನ್ನು ತೇಯ್ದು ಕಣ್ಣಿನ ಪೊರೆ ನಿವಾರಣೆ ಕಣ್ಣುಗಳಿಗೆ ಹಚ್ಚಲಾಗುತ್ತಿತ್ತು. ಈ ಗಿಡದ ಆದರ ಬಗ್ಗೆ ಸರಿಯಾಗಿ ತಿಳಿದು ಉಪಯೋಗಿಸುವುದು ಉತ್ತಮ.

ಕ್ಷೇತ್ರದರ್ಶನ



ಶ್ರೀ ಸೋಮನಾಥೇಶ್ವರ

ಮಂಗಳೂರು ನಗರದಿಂದ ದಕ್ಷಿಣಕ್ಕೆ ಸುಮಾರು 17 ಕಿ.ಮಿ ದೂರದಲ್ಲಿರುವ ಸೋಮೇಶ್ವರದ ಕಡಲ ಕಿನಾರೆಯಲ್ಲಿ ನೆಲೆನಿರುವ ಸೋಮನಾಥ ನಿಂದಲೇ ಈ ಊರಿಗೆ ಸೋಮೇಶ್ವರ ಎಂಬ ಹೆಸರು ಬಂತು ಎನ್ನಲಾಗುತ್ತದೆ. ಸಮುದ್ರತೀರದಲ್ಲಿರುವ ಶಿಲೆಯ ಮೇಲೆ ರುದ್ರ ಪಾದದ ಗುರುತು ಇರುವುದರಿಂದ ಈ ಕ್ಷೇತ್ರವನ್ನು 'ರುದ್ರ ಪಾದಕ್ಷೇತ್ರವೆಂದೂ ಕರೆಯುತ್ತಾರೆ. ಇಲ್ಲಿನ ಶಿವಲಿಂಗವನ್ನು ತ್ರೇತಾಯುಗದ ಕಾಲದಲ್ಲಿ ಪ್ರತಿಷ್ಠಾಪಿಸಲಾಯಿತ್ತೆನ್ನಲಾಗಿದೆ ಎಂದು ಐತಿಹ್ಯ ಹೇಳುತ್ತದೆ. ಭಾರತ ದೇಶದ ದಕ್ಷಿಣ ಭಾಗವನ್ನು ಶ್ರೀರಾಮಚಂದ್ರನ ರಾಮಾಯಣಕಾಲದಲ್ಲಿ ದಂಡಕಾರಣ್ಯವೆಂದು ಕರೆಯಲಾಗುತ್ತಿತ್ತು. ಇಲ್ಲಿನ ಜನಸ್ಥಾನವೆಂಬಲ್ಲಿ ಲಂಕಾಧಿಪತಿ ರಾವಣನಸಹೋದರ ಸಂಬಂಧಿಯರಾದ ಖರದೂಷಣರು ರಾಜ್ಯವಾಳುತ್ತಿದ್ದರು. ಇಲ್ಲಿನ ಎಲ್ಲಾ ಶಿವ ದೇವಸ್ಥಾನಗಳನ್ನು ಅವರೇ ಪ್ರತಿಷ್ಠಾಪಿಸಿದ್ದು ಎಂದು ಹೇಳಲಾಗುತ್ತದೆ. ಈ ಕಾರಣದಿಂದಲೇ, ಸಾಮಾನ್ಯವಾಗಿ ಈ ಊರಿನ ಎಲ್ಲಾ ಶಿವ ದೇವಸ್ಥಾನಗಳನ್ನು 'ಖರಾಸುರ ಪ್ರತಿಷ್ಠೆ' ಎಂದೇ ಹೇಳಲಾಗುತ್ತದೆ. ಹೀಗಾಗಿ ಸೋಮನಾಥ ದೇವಸ್ಥಾನವೂ ಖರಾಸುರನಿಂದ ಪ್ರತಿಷ್ಠಾಪಿಸಲಾಗಿದೆಯೆಂದು ಹೇಳಲಾಗುತ್ತದೆ. ಖರಾಸುರನು ಒಂದೇ ದಿನ ಪ್ರತಿಷ್ಠೆ ಮಾಡಿದಂತಹ ಮೂರು ಶಿವಲಿಂಗಗಳನ್ನು ತಂದನು. ಮೊದಲು ಕಾಣಿ ಮಾಡಿದ ತಕ್ಷಣ ತನ್ನ ಕೈಗಳನ್ನು ಶುದ್ಧೀಕರಿಸಿಕೊಂಡು, ಬಂಗಾರದ ಕೃತಕ ಕೈಗಳನ್ನು ಹೊಂದಿ ಕಡಲಾಚ ಎಂಬ ಹೆಸರು ಹೊಂದಿದ್ದ ಈ ಕ್ಷೇತ್ರ ಸಂದರ್ಶನಾರ್ಥವಾಗಿ ಹಡಗಿನಲ್ಲಿ ಹೊರಟಿದ್ದಾಗ, ಬಿರುಗಾಳಿಯ ರಭಸಕ್ಕೆ ಸಿಲುಕಿ ಹಡಗು ಒಡೆದು ಹೋಗಿದ್ದ ದಡಕ್ಕೆ ಜೀಗಿಯೊಂದರ ಸಹಾಯದಿಂದ ಸೋಮೇಶ್ವರದ ರುದ್ರಪಾದ ಎಂಬ ಬಂಡೆಕಲ್ಲಿನ ಬಳಿ ಬಂದು ಬಿದ್ದನಂತೆ. ಅಶ್ವತ್ಥವೃಕ್ಷ ಹಾಗೂ ಆಲ್ಲಿ ಅರಸನು ಏಕಾಂತದಿಂದ ನಿದ್ದೆ ಮಾಡಿದಾಗ ಅರಸನಿಗೆ 'ಅಲ್ಲಿ ಮೇಲೆ ಸಮುದ್ರಕ್ಕೆ ಒಂದು ಶಿವಲಿಂಗ ಇದ್ದು ಅದನ್ನು ಶೋಧಿಸಿ ದೇವಸ್ಥಾನ ಕಟ್ಟಿದರೆ ನಿನ್ನ ಕುಂಠಿದ ಕೈ ಮತ್ತೆ ಮೊದಲಿನಂತಾಗುತ್ತದೆ' ಎಂಬ ಅಶರೀರ ವಾಣಿಯೊಂದು ಕೇಳಿಸಿತ್ತಂತೆ. ಅದಾಗಿ ಅರಸನು ಶೋಧಿಸಿದಾಗ ಅಲ್ಲಿ ಶಿವಲಿಂಗ ಕಾಣಿಸಿ, ನಂತರ ಆ ಶಿವಲಿಂಗಕ್ಕೆ ದೇವಸ್ಥಾನ ಕಟ್ಟಿದ ನಂತರ ಅವನ ಕೈಗಳು ಮೊದಲಿನಂತಾದವು. ಕೂಡಲೇ ಸಂತಸಗೊಂಡ ಅರಸನು ಶ್ರೀ ಸೋಮನಾಥ ದೇವರ ಸನ್ನಿಧಿಯಲ್ಲಿ ತಲೆಬಾಗಿದ. ಅನಂತರ ಮುಂದೆ ಶ್ರೀ ಸೋಮನಾಥ ದೇವರ ಪ್ರತಿಷ್ಠಾಪನೆ ಮಾಡಿದನಂತೆ. ಅನಂತರ ರೋಜೆಯ ರಾಜರ ಆಡಳಿತದಲ್ಲಿ ಈ ದೇವಾಲಯವನ್ನು ಜೀರ್ಣೋದ್ಧಾರ ಮಾಡಿ, ಉತ್ತರ ದಿಕ್ಕಿನ ಉಳ್ಳಾಲದ ಅರಸರು ಪೂಜೆ, ಉತ್ಸವ ನಡೆಸಿಕೊಂಡು ಬರುತ್ತಿದ್ದರು. ದೇವಾಲಯದ ಎದುರು ಸುಮಾರು 6 ಅಡಿ ಎತ್ತರದ ಚೌಕಾಕಾರದ ಕಲ್ಲಿನ ಧ್ವಜಕಂಬ ಕಾಣಸಿಗುತ್ತದೆ. ದೇವಸ್ಥಾನದ ಒಳಗೆ ಅಂಗಣದಲ್ಲಿ ಬಲಭಾಗದ ಪೌಳಿಯಲ್ಲಿ ಸಪ್ತಮಾತೃಕಾ ವಿಗ್ರಹಗಳನ್ನು ಕಾಣಬಹುದು. ಸೋಮನಾಥ ದೇವಾಲಯದ ಮೂಲಸ್ಥಾನ ದೇವತೆಯು ಈಶ್ವರ ಸೋಮನಾಥ ಲಿಂಗರೂಪಿಯಾಗಿದ್ದು, ಗರ್ಭಗೃಹವು ಚೌಕಾಕಾರದ ಒಂದು ಗುಡಿಯಾಗಿದೆ. ಲಿಂಗದ ಎಡ ಮತ್ತು ಬಲ ಭಾಗ ಪೀಠದಲ್ಲಿ ಶಿವ, ಪಾರ್ವತಿ, ಬಲಮೂರ್ತಿಗಳಿವೆ. ದೇವಸ್ಥಾನದ ಪ್ರವೇಶದ್ವಾರದ ಬಳಿಯೇ ಇರುವ ಪಂಚದುರ್ಗೆಯರ ಗುಡಿಯ ಮುಂಭಾಗದಲ್ಲಿ ಮೆಟ್ಟಿಲುಗಳನ್ನು ಸೋಮನಾಥನ ದರ್ಶನಕ್ಕೆ ತೆರಳಬೇಕಾಗುತ್ತದೆ. ದೇವಸ್ಥಾನದ ಹೊರಾಂಗಣದಲ್ಲಿ ಮತ್ತೊಂದು ಶ್ರೀ ಸದ್ಯೋಜಾತ ಕ್ಷೇತ್ರಪಾಲ ಸನ್ನಿಧಿಯಿದೆ. ಶ್ರೀ ಪಾರ್ಶ್ವನಾಥರು, ಶ್ರೀ ಜನಾರ್ದನ ಮೂರ್ತಿ ಗುಡಿಗಳಿವೆ. ಹೊರ ಆಂಗಣದಲ್ಲಿ ಪರಿವಾರದ ಗುಡಿಯಿದೆ. ಕಲೆಯ ಪಕ್ಕದಲ್ಲಿ ಕಲ್ಲುರ್ಟಿ, ಕುಟ್ಟಿತ್ತಾಯ, ಗುಳಿಗ, ರಕ್ತೇಶ್ವರಿ ಎಂಬ ದೈವಗಳ ಗುಡಿಯೂ ಇದ್ದು ಅವರುಗಳಿಗೆ ಮಂಚ, ಖಡ್ಗ, ಮಣಿಗಂಟೆ ಮತ್ತು ಶಿಲೆ ಕಲ್ಲುಗಳು ಕಾಣಸಿಗುವುವು. ಇಲ್ಲಿ ಉದ್ಭವ ನಾಗನ ಬನವೂ ಕೂಡ ವಿಶೇಷವಾಗಿದೆ. ಈ ಪವಿತ್ರ ಕ್ಷೇತ್ರಕ್ಕೆ ಒಮ್ಮೆ ಬೇಟಿ ನೀಡಲು ಮರೆಯದಿರಿ.

ಕಾಮಧೇನು

ಪ್ರಕೃತಿಯೇ ನಮಗೆ ದಾರಿ ದೀಪ

@ ಕೃಷ್ಣಾಮೃತ

ರೋಲಪಾಡು ವನ್ಯಜೀವಿ ಅಭಯಾರಣ್ಯವು ಭಾರತದ ಆಂಧ್ರಪ್ರದೇಶದ ನಂದ್ಯಾಲ್ ಜಿಲ್ಲೆಯಲ್ಲಿರುವ ವನ್ಯಜೀವಿ ಅಭಯಾರಣ್ಯವಾಗಿದ್ದು, ಪ್ರಮುಖವಾಗಿ ಭಾರತೀಯ ಬಸ್ಟರ್ಡ್‌ನ ಆವಾಸಸ್ಥಾನವೆಂದು ಕರೆಯುವುದಾದ ಈ ಪ್ರದೇಶವು ಇತ್ತೀಚಿನ ವರ್ಷಗಳಲ್ಲಿ ಅಭಯಾರಣ್ಯದಲ್ಲಿ ಅವರ ಸಂಖ್ಯೆಯಲ್ಲಿ ತೀವ್ರ ಕುಸಿತವನ್ನು ಅನುಭವಿಸಿದೆ. ಆಂಧ್ರಪ್ರದೇಶದ ನಂದ್ಯಾಲ್ ಜಿಲ್ಲೆಯಲ್ಲಿರುವ ಅಭಯಾರಣ್ಯವು ಕರ್ನೂಲು ಕಡ ಸಡಿ ನಗರ ಸಮೀಪದಲ್ಲಿದೆ ಮತ್ತು ನಂದ್ಯಾಲ್ ಜಿಲ್ಲಾ ಕೇಂದ್ರದಿಂದ 40 ಕಿಮೀ, ಕಡಪದಿಂದ 172 ಕಿಮೀ ಮತ್ತು ರಾಯಚೂರಿನಿಂದ 152 ಕಿಮೀ ದೂರದಲ್ಲಿದೆ. 6.14 ಕಿಮೀ ವಿಸ್ತೀರ್ಣವನ್ನು ಹೊಂದಿದ್ದು, ಇದನ್ನು 1988 ರಲ್ಲಿ ಗ್ರೇಟ್ ಇಂಡಿಯನ್ ಬಸ್ಟರ್ಡ್ ಮತ್ತು ಕಡಿಮೆ ಫ್ಲೋರಿಕನ್ ಅನ್ನು ರಕ್ಷಿಸಲು ಸ್ಥಾಪಿಸಲಾಯಿತು ಮತ್ತು ಆಂಧ್ರಪ್ರದೇಶದಲ್ಲಿ ವಿಶೇಷವಾಗಿ ಆವಿಷ್ಕರಿಸಲ್ಪಡಿರುವ ಜಾತೀಯ ವಿಶಿಷ್ಟ ಆವಾಸಸ್ಥಾನವಾಗಿ ಉಳಿದಿದೆ. ಅಭಯಾರಣ್ಯವು ಹೆಚ್ಚಾಗಿ ಬಿಸಿಯಾದ, ಶುಷ್ಕ ಹವಾಮಾನದ ಪರಿಸ್ಥಿತಿಗಳು ಮತ್ತು ಆಗಾಗ್ಗೆ ಬರ ಮತ್ತು ಮಳೆಯೊಂದಿಗೆ ಅರೆ-ಶುಷ್ಕ ಸ್ಥಳವಾಗಿದ್ದು, ಬಯಲು ಪ್ರದೇಶವಾಗಿದೆ. ಇದು ಸರಾಸರಿ 290 ಮೀಟರ್ ಎತ್ತರವನ್ನು ಹೊಂದಿದ್ದು, ವಾರ್ಷಿಕವಾಗಿ ಸುಮಾರು 450 ಮಿ ಮೀ ಮಳೆಯನ್ನು ಪಡೆಯುತ್ತದೆ. ರೋಲ ಪಾಡು ಪ್ರಾಥಮಿಕವಾಗಿ ಮಿಶ್ರ ಕಾಡುಗಳು ಮತ್ತು ಮುಳ್ಳಿನ ಪೊದೆಗಳನ್ನು ಹೊಂದಿರುವ ಹುಲ್ಲುಗಾವಲು ಪರಿಸರ ವ್ಯವಸ್ಥೆಯಾಗಿದೆ. ಅಭಯಾರಣ್ಯದ ಸುತ್ತಲಿರುವ ಕೃಷಿ ಭೂಮಿಯಲ್ಲಿ ಹತ್ತಿ, ಕಂಬು ಮತ್ತು ಸೂರ್ಯಕಾಂತಿ ಬೆಳೆಯಲಾಗುತ್ತದೆ. ಜೆರೋಫೈಟ್ ಮರಗಿಡಗಳಾದ, ಸ್ಕ್ರಬ್, ಯಾ ಕ್ಯಾರಿಗಾ, ಅಕೇಶಿಯಾ, ಬಬ್ಬುಲು ಮತ್ತು ಹುಲ್ಲುಗಳು ರೋಲಪಾಡುವಿನಲ್ಲಿ ಪಕ್ಷಿ ಗೂಡು ಕಟ್ಟಲು ತುಂಬಾ ಉಪಯುಕ್ತವಾಗಿವೆ. ರೋಲಪಾಡು ಅಭಯಾರಣ್ಯವು ವೈವಿಧ್ಯಮಯ ಪ್ರಾಣಿ ಮತ್ತು ಪಕ್ಷಿ ಸಂಕುಲಕ್ಕೆ ನೆಲೆಯಾಗಿದ್ದು, ನರಿಗಳು, ಬ್ಲ್ಯಾಕ್ ಬಕ್, ಮಾಕಾಕ್‌ಗಳು, ಕಾಡಿನ ಬೆಕ್ಕುಗಳು, ಸೋಮಾರಿ ಕರಡಿಗಳು ಮತ್ತು ಕತ್ತೆ ಕಿರುಬ ನಂತಹ ಪ್ರಾಣಿಗಳು ಕಂಡುಬರುತ್ತವೆ. ರಸೆಲ್ ವೈಪರ್ ಮತ್ತು ಭಾರತೀಯ ನಾಗರಹಾವು ಸಹ ವರದಿಯಾಗಿವೆ. ಇದು ಅಭಯಾರಣ್ಯದ ಸಮೀಪದಲ್ಲಿರುವ ಅಲಗನೂರ್ ಜಲಾಶಯದೊಂದಿಗೆ 132 ಪಕ್ಷಿ ಪ್ರಭೇದಗಳನ್ನು ಸಹ ಹೊಂದಿದೆ. ಬಸ್ಟರ್ಡ್ ಮತ್ತು ಫ್ಲೋರಿಕನ್ ಜೊತೆಗೆ ರೋಲಪಾಡುವಿನ ಗಮನಾರ್ಹ ಬದುಕು ಕೆಲವು ಪಕ್ಷಿ ಪ್ರಭೇದಗಳಲ್ಲಿ ಭಾರತೀಯ ರೋಲರ್‌ಗಳು, ಹಲವಾರು ಪ್ರಾಣಿ ಪ್ರಭೇದಗಳು, ಸಣ್ಣ ಹಕ್ಕಿಗಳು ಹಾವು ಹದ್ದುಗಳು ಸೇರಿವೆ. ಇದರ ಜೊತೆ ಜೀವಂತ ಅಂದ ವಲಸೆ ಜಲಪಕ್ಷಿಗಳ ಬಾರ್-ಹೆಡೆಡ್ ಹೆಬ್ಬಾತುಗಳು, ಡೆಮೊಸೆಲ್ಲೆ ಕ್ರೇನ್‌ಗಳು ಮತ್ತು ಬಿಳಿ ಕೊಕ್ಕರೆ ಪ್ರಮುಖವಾಗಿದೆ. ಅಭಯಾರಣ್ಯದಲ್ಲಿ ಕೃಷ್ಣಮೃಗಗಳ ಸಂಖ್ಯೆಯಲ್ಲಿನ ಹೆಚ್ಚಳವು ಅಳಿವಿನಂಚಿನ ಬಸ್ಟರ್ಡ್ ಮತ್ತು ಫ್ಲೋರಿಕನ್ ಸಂಖ್ಯೆ ಕುಸಿತಕ್ಕೆ ಒಂದು ಕಾರಣವೆಂದು ಪ್ರತಿಪಾದಿಸಲಾಗಿದೆ. ಹುಲ್ಲಿನ ಮೇಲೆ ಅವುಗಳ ಆಹಾರ ಮಿತಿ ಮೀರಿದ ಆವಾಸಸ್ಥಾನವು ಮತ್ತೀಗ ಈ ಹಕ್ಕಿ ಜಾತಿಗಳ ಸಂಖ್ಯೆಯಲ್ಲಿ ಕುಸಿತಕ್ಕೆ ಕಾರಣವಾಗಿದೆ. ಇದು ಎರಡು ಪಕ್ಷಿ ಪ್ರಭೇದಗಳಿಗೆ ಆಹಾರದ ಪ್ರಮುಖ ಮೂಲವಾಗಿದೆ. 1980 ರ ದಶಕದಲ್ಲಿ ಬಸ್ಟರ್ಡ್‌ನ ರಕ್ಷಣೆಗೆ ಸೂಕ್ತವಾದ ತಾಣವಾಗಿ ಸ್ಥಾಪಿತವಾದ ರೋಲಪಾಡು ಸಂರಕ್ಷಣಾ ಪ್ರಯತ್ನಗಳು ಇತ್ತೀಚಿನ ವರ್ಷಗಳಲ್ಲಿ ಬಸ್ಟರ್ಡ್ ಜನಸಂಖ್ಯೆಯು ಕುಸಿಯುವುದರೊಂದಿಗೆ ಇತ್ತೀಚಿನ ವರ್ಷಗಳಲ್ಲಿ ತೀವ್ರ ಹಿನ್ನಡೆಯನ್ನು ಅನುಭವಿಸಿದೆ. ಅಭಯಾರಣ್ಯವು ಸುಮಾರು 800 ಕೃಷ್ಣಮೃಗಗಳನ್ನು ಹೊಂದಿದ್ದು, ಇದು ಅಭಯಾರಣ್ಯದ ಗಡಿಯನ್ನು ಮೀರಿದ ಕೃಷಿ ಭೂಮಿಗಳ ಮೇಲೆ ಆಗಾಗ್ಗೆ ದಾಳಿ ಮಾಡುತ್ತದೆ. ಇದು ಅಭಯಾರಣ್ಯದ ಎದುರು ಸರ್ವಾಜನಿಕ ಕೋಪಕ್ಕೆ ಕಾರಣವಾಗಿದೆ. ಅಭಯಾರಣ್ಯದ ಬಳಿ ಕೃಷಿ ಚಟುವಟಿಕೆಗಳ ಹೆಚ್ಚಳ ಮತ್ತು ವ್ಯಾಪ್ತಿಯಲ್ಲಿ ಜಾನುವಾರುಗಳನ್ನು ಮೇಯಿಸುವುದರಿಂದ ಬಸ್ಟರ್ಡ್‌ಗಳ ಸಂತಾನೋತ್ಪತ್ತಿಯ ಮೇಲೂ ಪರಿಣಾಮ ಬೀರಿದೆ. ಆಲಗನೂರು ಜಲಾಶಯದಲ್ಲಿ ತೆಲುಗು ಗಂಗಾ ಕಾಲುವೆಯಿಂದ ನೀರು ಹರಿಸುವುದರಿಂದ ಪರಿಸರ ವ್ಯವಸ್ಥೆಯಲ್ಲಿ ಬದಲಾವಣೆಗಳು ಮತ್ತು ಈ ಅರೆ-ಶುಷ್ಕ ಪ್ರದೇಶದಲ್ಲಿ ಆಂತರ್ಜಲ ಮಟ್ಟಗಳ ಪರಿಣಾಮವಾಗಿ ಅಭಯಾರಣ್ಯದ ಪರಿಧಿಯ ಸುತ್ತಲೂ ಆಕ್ರಮಣ ಮಾಡುವಂಥ ಸಸ್ಯವರ್ಗದಲ್ಲಿ ಮತ್ತು ಕೃಷಿಯ ಸ್ವರೂಪದಲ್ಲಿ ಬದಲಾವಣೆಗಳಿಗೆ ಕಾರಣವಾಯಿತು. ಬದಲಾವಣೆಯು ವ್ಯಾಪ್ತಿ ಹೆಚ್ಚಾಗುವುದಕ್ಕೆ ಕಾರಣವಾಗಿ ಹುಲ್ಲುಗಾವಲುಗಳ ಸಂಕುಚನ ಸೃಷ್ಟಿಸಿತು. ಇತ್ತೀಚಿನ ವರ್ಷಗಳಲ್ಲಿ ಬಸ್ಟರ್ಡ್ ಮತ್ತು ಫ್ಲೋರಿಕನ್ ಮತ್ತು ಗ್ರೇಟ್ ಇಂಡಿಯನ್ ಬಸ್ಟರ್ಡ್‌ಗಳು ಇಲ್ಲಿ ಕಂಡುಬಂದಿಲ್ಲ, ಪುನರ್‌ಸ್ಥಾಪಿಸಲು ಸರ್ಕಾರ ಕ್ರಮ ತೆಗೆದುಕೊಳ್ಳಬೇಕೆಂದು ಹಲವರ ಅಭಿಪ್ರಾಯ.

ಕಲ್ಪವೃಕ್ಷ

@ಪ್ರೀತಂ ರೈ ಇ

ಸ್ಕ್ವಾಡ್ರನ್ ಲೀಡರ್ ಜೀವಾ ಸಿಂಗ್

1971 ರ ಸಮಯದಲ್ಲಿ, ಸ್ಕ್ವಾಡ್ರನ್ ಲೀಡರ್ ಜೀವಾ ಸಿಂಗ್ ಅವರು 'ವಾರಿಯರ್ಸ್' ಎಂದು ಕರೆಯಲ್ಪಡುವ 26 Sqn ನೊಂದಿಗೆ ಸೇವೆ ಸಲ್ಲಿಸುತ್ತಿದ್ದು, ಏರ್ ಫೋರ್ಸ್ ಸ್ಟೇಷನ್ ಆದಂಪುರದಲ್ಲಿ ನೆಲೆಗೊಂಡಿತು. ನಂ. 26 Sqn, AF ಅನ್ನು Wg Cdr MM ಸಿಂಗ್ ಅವರ ನೇತೃತ್ವದಲ್ಲಿ 1968 ರ ಜನವರಿ 1 ರಂದು ಆದಂಪುರದಲ್ಲಿ ರಚಿಸಲಾಯಿತು. ಅದನ್ನು SU-7 ವಿಮಾನವನ್ನು ಹೊಂದಿದ IAF ನಲ್ಲಿ ಎರಡನೇ ಸ್ಕ್ವಾಡ್ರನ್ ಆಗಿತ್ತು. 03 ಡಿಸೆಂಬರ್ 1971 ರಂದು ಪಾಕಿಸ್ತಾನದೊಂದಿಗೆ ಯುದ್ಧವು ಪ್ರಾರಂಭವಾದಾಗ, ವಿಂಗ್ ಕಮಾಂಡರ್ ರಾಮ್ ಕೃಷ್ಣ ಬಾಕ್ಷಾ ಅವರು ಕಮಾಂಡಿಂಗ್ ಅಧಿಕಾರಿಯಾಗಿ ಸ್ಕ್ವಾಡ್ರನ್ ವಿವಿಧ ಆಕ್ರಮಣಕಾರಿ ವಾಯು ಕಾರ್ಯಾಚರಣೆಗಳನ್ನು ಕೈಗೊಂಡಿತು. 8 ಟ್ಯಾಕ್ಟಿಕಲ್ ಏರ್ ಕಮಾಂಡ್ (TAC) ನೊಂದಿಗೆ ಕ್ಲೋಸ್ ಏರ್ ಸಪೋರ್ಟ್ (CAS) ಕಾರ್ಯಾಚರಣೆಗಳನ್ನು ಹಾಗಾಗಿ ಪ್ರತಿ ಮೇಲ ಪತ್ರದಲ್ಲಿರುವ ಸ್ಕ್ವಾಡ್ರನ್ ಯುದ್ಧದಲ್ಲಿ ಸಕ್ರಿಯ ಪಾತ್ರವನ್ನು ವಹಿಸಿತು. ಇದು 6 TAC ಯೊಂದಿಗೆ ಹಲವಾರು ವಿಹಾರಗಳನ್ನು ನಡೆಸಿತು. ಸ್ಕ್ವಾಡ್ರನ್ ಲೀಡರ್ ಜೀವಾ ಸಿಂಗ್ ಅವರಿಗೆ 07 ಡಿಸೆಂಬರ್ 1971 ರಂದು ಅಂತಹ ಒಂದು ಕಾರ್ಯಾಚರಣೆ ಯನ್ನು ಕೈಗೊಳ್ಳಲು ಜವಾಬ್ದಾರಿ ವಹಿಸಲಾಯಿತು. ಈ ಕಾರ್ಯಾಚರಣೆಯ ಚಂಬ್ ಪ್ರದೇಶದಲ್ಲಿ ಸೇನಾ ಕಾರ್ಯಾಚರಣೆಗಳಿಗೆ ನಿಕಟವಾದ ವಾಯು ಬೆಂಬಲವನ್ನು ಒದಗಿಸಲು ಎರಡು ವಿಮಾನಗಳ ಕಾರ್ಯಾಚರಣೆಯಾಗಿತ್ತು. 7 ಡಿಸೆಂಬರ್ 1971 ರಂದು, ಸ್ಕ್ವಾಡ್ರನ್ ಲೀಡರ್ ಜೀವಾ ಸಿಂಗ್ ಅವರು ತಮ್ಮ ಸುಖೋಯ್-7 (B-902) ನಲ್ಲಿ ಆದಂಪುರದಿಂದ ಕಾರ್ಯಾಚರಣೆಗಾಗಿ ಯೋಜಿಸಿದಂತೆ ಟೇಕಾಫ್ ಮಾಡಿದರು. ಅವರು ಛಂಬ್ ಮೇಲೆ ಎರಡು-ವಿಮಾನದ ನಿಕಟ ವಾಯು ಬೆಂಬಲ ಕಾರ್ಯಾಚರಣೆಯನ್ನು ಮುನ್ನಡೆಸುತ್ತಿದ್ದರು. ಗುರಿಯ ಪ್ರದೇಶವು ಶತ್ರುಗಳ ಮುಖ್ಯವಾದ ಕಾರಣ, ವಿಮಾನ ವಿರೋಧಿ ಬಂದೂಕುಗಳು ಮತ್ತು ವಾಯು ರಕ್ಷಣಾ ವಿಮಾನಗಳಿಂದ ಅದನ್ನು ಹೆಚ್ಚು ರಕ್ಷಿಸಲಾಯಿತು. ಶತ್ರುಗಳ ವಾಯು ರಕ್ಷಣಾ ಆಸ್ತಿಗಳ ಬೆದರಿಕೆಯ ಹೊರತಾಗಿಯೂ, ಸ್ಕ್ವಾಡ್ರನ್ ಲೀಡರ್ ಜೀವಾ ಸಿಂಗ್ ಮತ್ತು ಅವರ ಒಡನಾಡಿ ದಾಳಿಗೆ ಹೋದರು. ನಮ್ಮ ನೆಲದ ಪಡೆಗಳನ್ನು ತೊಡಗಿಸಿಕೊಂಡ ಶತ್ರು ಟ್ಯಾಂಕ್‌ಗಳನ್ನು ಮತ್ತು ಪಡೆಗಳನ್ನು ಹುಡುಕಲು ಮತ್ತು ಹೊಡೆಯಲು ಸ್ಕ್ವಾಡ್ರನ್ ಲೀಡರ್ ಜೀವಾ ಸಿಂಗ್ ನೇತೃತ್ವದ ರಚನೆಯನ್ನು ನಡೆಸಿದರು. ಅವರು ಸ್ಥಾನದಲ್ಲಿದ್ದಾಗ, ಟ್ಯಾಂಕ್ ಸ್ಥಾನಗಳನ್ನು ಯಶಸ್ವಿಯಾಗಿ ಪತ್ತೆ ಮಾಡಿ, ಅವರ ವಿಭಾಗವು ಶತ್ರು ವಿಮಾನಗಳಿಂದ ಸುತ್ತುವರಿಯಲ್ಪಟ್ಟಿದ್ದರೂ ಸಹ ತನ್ನ ದಾಳಿಯನ್ನು ಮುಂದುವರಿಸಿದರು. ಸ್ಕ್ವಾಡ್ರನ್ ಲೀಡರ್ ಜೀವಾ ಸಿಂಗ್ ವೈಮಾನಿಕ ಯುದ್ಧದಲ್ಲಿ ಶತ್ರು F-104 ಅನ್ನು ಯಶಸ್ವಿಯಾಗಿ ತೊಡಗಿಸಿಕೊಂಡರು. ಆದಾಗ್ಯೂ, ಅವರ ವಿಮಾನವು ಶತ್ರು ಬೆಂಕಿಯಿಂದ ಹಾನಿಗೊಳಗಾಯಿತು. ಸ್ಕ್ವಾ.ಲೀಡರ್ ಜೀವಾ ಸಿಂಗ್ ಅವರನ್ನು ನಾಪತ್ತೆ ಎಂದು ಘೋಷಿಸಲಾಯಿತು, ಅವರ ವಿಮಾನ ಹಿಂದಿರುಗಿ ಬರಲಿಲ್ಲ. ಸ್ಕ್ವಾ.ಲೀಡರ್ ಜೀವಾ ಸಿಂಗ್ ವಿಮಾನವು ಶತ್ರುವಿನೊಂದಿಗೆ ಕೆಳಗೆ ಇಳಿದು ಹುತಾತ್ಮರಾದರು. ಸ್ಕ್ವಾಡ್ರನ್ ಲೀಡರ್ ಜೀವಾ ಸಿಂಗ್ ಒಬ್ಬ ಧೀರ ಸೈನಿಕ ಮತ್ತು ಬದ್ಧ ವಾಯುಯೋಧರಾಗಿದ್ದರು, ತಮ್ಮ ಕರ್ತವ್ಯದ ಸಾಲಿನಲ್ಲಿ ತಮ್ಮ ಪ್ರಾಣವನ್ನು ಅರ್ಪಿಸಿದರು. ಸ್ಕ್ವಾಡ್ರನ್ ಲೀಡರ್ ಜೀವಾ ಸಿಂಗ್ ಅವರಿಗೆ ಅವರ ಅತ್ಯುತ್ತಮ ಶೌರ್ಯ, ಕರ್ತವ್ಯ ನಿಷ್ಠೆ ಮತ್ತು ಅತ್ಯುನ್ನತ ತ್ಯಾಗಕ್ಕಾಗಿ 'ವೀರ ಚಕ್ರ' ಶೌರ್ಯ ಪ್ರಶಸ್ತಿಯನ್ನು ನೀಡಲಾಯಿತು. ಜೀವಾ ಸಿಂಗ್ ಹರಿಯಾಣದ ಅಂಬಾಲಾ ಜಿಲ್ಲೆಯಲ್ಲಿ 15 ಜುಲೈ 1930 ರಂದು ಜನಿಸಿದರು. ಇವರನ್ನು ಕರಾವಳಿ ತರಂಗಿಣಿ ಹೆಮ್ಮೆಯಿಂದ ನೆನಪಿಸಿಕೊಳ್ಳುತ್ತದೆ.

ಪಾರಿಜಾತ

ಕರಾವಳಿ ತರಂಗಿಣಿ

ಒಂದು ಮನೆಯಲ್ಲಿ ಹುಟ್ಟಿ ಇನ್ನೊಂದು ಮನೆ ಬೆಳಗುವ ಹೆಣ್ಣು ತನ್ನ ಜೀವನದ ಹಾದಿಯಲ್ಲಿ ಮಾಡಿದ ಸಾಧನೆ ಅಪಾರ. ಅಂತಹ ಸಾಧನೆಗಳಲ್ಲಿ ಸಮಾಜದ ಇತರ ಮಹಿಳೆಯೂ ಹೆಣ್ಣು ಮಕ್ಕಳಿಗೆ ಮಾದರಿಯಾಗಿದ್ದಾಳೆ. ಅಂತಹ ಹೆಣ್ಣು ಮಕ್ಕಳಲ್ಲಿ ಕರಾವಳಿ ತರಂಗಿಣಿ ಇಂದು ಪರಿಚಯಿಸುತ್ತಿರುವ ಅತಿ ಶ್ರೇಷ್ಠ ಹಾಗೂ ಭಾರತೀಯ ದೇಸಿ ಬೀಜ ರಕ್ಷಣೆ ಮತ್ತು ಸಂರಕ್ಷಣೆಯಲ್ಲಿ ತೊಡಗಿಸಿಕೊಂಡಿರುವ ಮಹಿಳೆ. "ಬೀಜ ಮಾತಾ" ಎಂಬ ಬಿರುದು ಇವರ ಹೆಸರಲ್ಲಿ, ಬಿಬಿಸಿಯ 100 ಮಹಿಳೆಯರು 2018ರ ಪಟ್ಟಿಯಲ್ಲಿರುವ ಮೂವರು ಭಾರತೀಯರಲ್ಲಿ ಒಬ್ಬರಾದ ರಾಹಿಬಾಯಿ ಸೋಮಾ ಪೋಪರೆ. ಪೋಪರೆ ಅವರು ಮಹಾರಾಷ್ಟ್ರದ ಅಹಮದ್‌ನಗರ ಜಿಲ್ಲೆಯ ಅಕೋಲೆ ಬ್ಲಾಕ್ ನಲ್ಲಿರುವ ಕೊಂಭಲ್ನೆ ಗ್ರಾಮದ ಮಹಾರಾಷ್ಟ್ರದ ಮಹಾದೇವ ಕೋಲಿ ಸಮುದಾಯದಲ್ಲಿ ಜನಿಸಿದರು. ಅವರು ಔಪಚಾರಿಕ ಶಿಕ್ಷಣವನ್ನು ಪಡೆಯಲಿಲ್ಲ. ಅವರು ತಮ್ಮ ಜೀವನದುದ್ದಕ್ಕೂ ಹೊಲಗಳಲ್ಲಿ ಕೆಲಸ ಮಾಡಿದ್ದು ಮತ್ತು ತನ್ನನ್ನು ಬೆಳೆಗಳ ವೈವಿಧ್ಯತೆಯ ಬಗ್ಗೆ ಆಳವಾದ ಜ್ಞಾನದೊಂದಿಗೆ ಹೊಂದಿದ್ದಾರೆ. ರಾಹಿಬಾಯಿ ಸೋಮಾ ಪೋಪರೆ ಅವರು ತಮ್ಮ ಕೃಷಿ ಭೂಮಿಯಲ್ಲಿ 17 ವಿವಿಧ ಬೆಳೆಗಳನ್ನು ಬೆಳೆಯುತ್ತಾರೆ. ಅವರನ್ನು 2017ರಲ್ಲಿ ಬಿಬಿಸಿ ತಂಡ ಭೇಟಿ ಮಾಡಿತು. ರಾಹಿಬಾಯಿ ಅವರು ತಮ್ಮ ಹಳ್ಳಿಯ ಇಡೀ ರೈತರ ಕುಟುಂಬದ ಆಹಾರದ ಅವಶ್ಯಕತೆಗಳನ್ನು ಪೂರೈಸಲು ಸಾಕಷ್ಟು ಬೆಳೆಯನ್ನು ಬೆಳೆದು ಅವರ ಹಳ್ಳಿ ಎಂದು ತಿಳಿದು ಬಂತು. ಅವರ ಹಳ್ಳಿ ರಡ ಹಳ್ಳಿಗಳಲ್ಲಿ ಸ್ವ-ಸಹಾಯ ಗುಂಪುಗಳು ಮತ್ತು ಕುಟುಂಬಗಳೊಂದಿಗೆ ಹರಿಯಾಣೆ ನ ಮಾಜಿ ಮಹಾನಿರ್ದೇಶಕ ರಘುನಾಥ್ ಮಶೆಲ್ಕರ್ ಅವರು 'ಬೀಜ ಮಾತೆ' ಎಂದು ಬಣ್ಣಿಸಿದ್ದಾರೆ. ಅವರು ಸ್ವ-ಸಹಾಯ ಗುಂಪು ಕಲ್ಸುಬಾಯಿ ಪರಿಸರ ಬೀಜಗಳ ಸಂರಕ್ಷಣಾ ಕೇಂದ್ರದ ಸಕ್ರಿಯ ಸದಸ್ಯೆ ಹೊಲಗಳಲ್ಲಿ ತಮ್ಮ ಕೊಯ್ಲು ಮಾಡುವ ಮತ್ತು ತನ್ನದೇ ಆದ ವಿಧಾನಗಳನ್ನು ರಚಿಸಿ ಹಾಳುಭೂಮಿಯನ್ನು ಉತ್ಪಾದಕ ಭೂಮಿಯನ್ನಾಗಿ ಪರಿವರ್ತಿಸುತ್ತಾರೆ. ಅವರು ರೈತರು ಮತ್ತು ವಿದ್ಯಾರ್ಥಿಗಳಿಗೆ ಬೀಜಗಳನ್ನು ಆಯ್ಕೆ ಮಾಡುವ ವಿಧಾನಗಳ ಬಗ್ಗೆ ತರಬೇತಿ ನೀಡುತ್ತಾರೆ. ಫಲವತ್ತಾದ ಮಣ್ಣನ್ನು ಇಟ್ಟು ಹೇಗೆ ಕೀಟಗಳನ್ನು ನಿರ್ವಹಿಸುತ್ತಾರೆ. ರಾಹಿಬಾಯಿ ಅವರು ನಾಲ್ಕು ಹಂತದ ಭತ್ತದ ಕೃಷಿಯನ್ನು ನಿರಂತರ ಮತ್ತು ಅವರ ಮಹಾರಾಷ್ಟ್ರದ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ ಟ್ರಾನ್ಸ್‌ಫರ್ ಫಾರ್ ರೂರಲ್ ಏರಿಯಾಸ್ ನ ಬೆಂಬಲದೊಂದಿಗೆ ಅವರು ತಮ್ಮ ಹೊಲದಲ್ಲಿ ಕೋಳಿ ಸಾಕಣೆಕೆಯಲ್ಲಿ ತೊಡಗಿದ್ದಾರೆ. ಅವರು ತಮ್ಮ ಕೆಲಸಕ್ಕಾಗಿ ಭಾರತ ಸರಕಾರ ಪದ್ಮಶ್ರೀ ಪ್ರಶಸ್ತಿ ನೀಡಿ ಗೌರವಿಸಿದೆ. ಅವರ ಜೊತೆಗೆ ಹಲವಾರು ಪ್ರಶಸ್ತಿಗಳು ಅವರ ಮುಡಿ ಏರಿವೆ. ಅವುಗಳಲ್ಲಿ ಅತ್ಯುತ್ತಮ ಬೀಜ ರಕ್ಷಕ ಪ್ರಶಸ್ತಿ, BAIF ಡೆವಲಪ್‌ಮೆಂಟ್ ರಿಸರ್ಚ್ ಫೌಂಡೇಶನ್ ಅತ್ಯುತ್ತಮ ರೈತ ಪ್ರಶಸ್ತಿ, ನಾರಿ ಶಕ್ತಿ ಪುರಸ್ಕಾರ್ 2018ನ್ನು ಭಾರತ ಸರ್ಕಾರದ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವಾಲಯದಿಂದ ನೀಡಿದೆ. ಇದರ ಜೊತೆಗೆ ಅವರು 2015 ರಲ್ಲಿ ಬಯೋವರ್ಸಿಟಿ ಇಂಟರ್‌ನ್ಯಾಷನಲ್‌ನ ಗೌರವ ಎಂಟಾನಿಗಾನ ಫೆಲೋ, ಫ್ರಾನ್ ಮಾಹರ್ ಮತ್ತು ಭಾರತದಲ್ಲಿ ಕೃಷಿ ಪ್ರಭೇದಗಳು ಮತ್ತು ರೈತರ ಹಕ್ಕುಗಳ ರಕ್ಷಣೆಗಾಗಿ ಸರ್ಕಾರ ಸಂಸ್ಥೆಯ ಅಧ್ಯಕ್ಷ ಆರ್.ಆರ್. ಹಂಚಿನಾಳ್ ಅವರಿಂದ ಮತ್ತೊಮ್ಮೆ ನೀಡಲಾಯಿತು. ಇಂತಹ ಮಹಾನ್ ಸಾಧಕಿಗೆ ಕರಾವಳಿ ತರಂಗಿಣಿ ನಮಿಸುತ್ತಿದೆ. ನಮ್ಮ ಅಭಿನಂದನೆಗಳು, ಕೌನ್ಸಿಲ್ ಆಫ್ ಸೈಂಟಿಫಿಕ್ ಅಂಡ್ ಇಂಡಸ್ಟ್ರಿಯಲ್ ರಿಸರ್ಚ್

ಮುಂದಿನ ಬಾರಿ ರಾಜ್ಯದಲ್ಲಿ ಎನ್‌ಡಿಎ ಸರ್ಕಾರ : ಬಿ.ವೈ.ವಿ

ಒಂದನೇ ಪುಟದಿಂದ......

ಮತಗಳ ಅಂತರದಲ್ಲಿ ಗೆದ್ದಿದ್ದಾರೆ. ಪ್ರತಿಯೊಂದು ಕ್ಷೇತ್ರದಲ್ಲಿ ನಮ್ಮ ಅಭ್ಯರ್ಥಿಗಳು ವಿಜಯ ಸಾಧಿಸಿದ್ದಾರೆ. ಸೋಲಿನಲ್ಲಿ ಸರದಾರ ಅಂತ ಕಾಂಗ್ರೆಸ್ ಅಭ್ಯರ್ಥಿ ಮೆರೆಯುತ್ತಿದ್ದರು. ಅಂತಹವರನ್ನು 900ಕ್ಕೂ ಹೆಚ್ಚು ಮತಗಳ ಅಂತರದಲ್ಲಿ ಸೋಲಿಸಿದ್ದಾರೆ. ರಾಜ್ಯದ ಪ್ರಜ್ಞಾವಂತ ಮತದಾರರಿಗೆ ಧನ್ಯವಾದ ಅರ್ಪಿಸುತ್ತೇನೆ. ಬಿಜೆಪಿ, ಜೆಡಿಎಸ್ ಮುಖಂಡರು ಕಾರ್ಯಕರ್ತರಿಗೆ ನಾವು ಧನ್ಯವಾದ ಹೇಳುತ್ತೇನೆ ಎಂದರು. ಈ ಫಲಿತಾಂಶ ನಾನಾ ರೀತಿಯ ವಿಶ್ಲೇಷಣೆಗೆ ಕಾರಣವಾಗಿದೆ. ರಾಜ್ಯದಲ್ಲಿ ಆಡಳಿತ ನಡೆಸುತ್ತಿರುವ ಕಾಂಗ್ರೆಸ್ ಸರ್ಕಾರ ಗ್ಯಾರಂಟಿಗಳ ಭ್ರಮೆಯಲ್ಲಿರುವ ಸರ್ಕಾರವಿದು. ಅಧಿಕಾರದ ಅಮಲಿನಲ್ಲಿ ಕಾಂಗ್ರೆಸ್ ತೇಲುತ್ತಿದೆ. ನಾಡಿನ ರೈತರ ಜೊತೆ ಚೆಲ್ಲಾಟವಾಡಿ ಒಂದೇ ಒಂದು ಕೆಲಸ ಮಾಡಿಲ್ಲ. ಬರಗಾಲದ ಪರಿಹಾರ ಕೊಡಲು ಸಾಧ್ಯವಾಗಿಲ್ಲ, ಉದ್ಯೋಗ ಕೊಡಲು ಆಗಿಲ್ಲ, ಮುಡಾ ಹಗರಣ, ವಾಲ್ಮೀಕಿ ಹಗರಣ, ಸಚಿವರ ರಾಜೀನಾಮೆಗೆ ಬಳ್ಳಾರಿ ಚಲೋ ಮಾಡಿದ್ವಿ, ಕಾಂಗ್ರೆಸ್ ಬಣ್ಣ ಬಯಲು ಮಾಡಿದ್ದೇವೆ. ನಮ್ಮ ಹೋರಾಟದ ಪರಿಣಾಮ ಜನರು ಈ ಬಾರಿ ಎನ್‌ಡಿಎ ಸರ್ಕಾರ ತರಲು ಚಿಂತನೆ ನಡೆಸಿದ್ದಾರೆ ಎಂದು ಹೇಳಿದರು. ಈ ಚುನಾವಣೆ ಫಲಿತಾಂಶ 120 ರಿಂದ 130 ಕ್ಷೇತ್ರದ ಮತದಾರರು ಕೊಟ್ಟಿರುವ ತೀರ್ಪು. ಸಿಎಂ ಡಿ.ಕೆ.ಶಿವಕುಮಾರ್ ಕಪಟ ನಾಟಕಆಡ್ತಿದ್ದಾರೆ. ಕಾಂಗ್ರೆಸ್ ಸರ್ಕಾರವನ್ನು ಬುಡ ಸಮೇತಕಿತ್ತು ಹಾಕುವ ತೀರ್ಮಾನಕ್ಕೆ ಈಗಾಗಲೇ ಜನ ಬಂದಿದ್ದಾರೆ. ರಾಜ್ಯದ ಹಣಕಾಸಿನ ಪರಿಸ್ಥಿತಿ ಹದಗೆಟ್ಟಿದೆ. ಬಿಜೆಪಿಗೆ ಆಶೀರ್ವಾದ ಮಾಡಲು ಮತದಾರರು ರೆಡಿಯಾಗಿದ್ದಾರೆ ಎಂದರು.

ಕಾಂಗ್ರೆಸ್ ಸರಕಾರದ ಅಹಂಕಾರಕ್ಕೆ ಕಪಾಳಮೋಕ್ಷ: ಎಚ್‌ಡಿಕೆ

ಒಂದನೇ ಪುಟದಿಂದ......

ಮೈತ್ರಿಯ ಹೋರಾಟಕ್ಕೆ ನಾಡಿನ ಜನತೆಯ ಆಶೀರ್ವಾದವಿದೆ ಎಂಬುದಕ್ಕೆ ಸ್ಪಷ್ಟ ದಿಕ್ಸೂಚಿ ಎಂದು ಬಣ್ಣಿಸಿದರು. ಪದವೀಧರ-ಶಿಕ್ಷಕರ ಕ್ಷೇತ್ರಗಳ ಚುನಾವಣೆಯಲ್ಲಿ ಎನ್‌ಡಿಎ ಮೈತ್ರಿಕೂಟದ ಅಭ್ಯರ್ಥಿಗಳಾದ ನಮೋಶಿ, ಎಸ್.ವಿ. ಸಂಕನೂರು, ಕೆ.ಎಂ.ಸುರೇಶ್ ಹಾಗೂ ಎ.ಪಿ. ರಂಗನಾಥ್ ಗೆಲುವು ಸಾಧಿಸಿದ್ದಾರೆ. ಅವರೆಲ್ಲರಿಗೂ ಅಭಿನಂದನೆಗಳು. ಜೆಡಿಎಸ್ ಕಾರ್ಯಕರ್ತರ ಸಮನ್ವಯತೆಯಿಂದ ಗೆಲುವು ಸಾಧ್ಯವಾಗಿದೆ. '2028ರಲ್ಲೂ ನಾವೇ ಅಧಿಕಾರಕ್ಕೆ ಬರುತ್ತೇವೆ' ಎಂದು ಜಂಬಕೊಚ್ಚುತ್ತಿದ್ದ ಸಿಎಂ, ಸಚಿವರ ಅಹಂಕಾರವನ್ನು ಮತದಾರರು ಮಣ್ಣುಪಾಲು ಮಾಡಿದ್ದಾರೆ ಎಂದು ಅವರು ಟೀಕಿಸಿದರು. ನಿತ್ಯ ಕೇವಲ ಬಾಯಿಮಾತಿನ ಭರವಸೆಗಳು ಮತ್ತು ಘೋಷಣೆಗಳಿಗೆ ಸೀಮಿತವಾಗಿರುವ ಈ ಸರಕಾರದ ವಿರುದ್ಧ ಜನ ಆಕ್ರೋಶಗೊಂಡಿದ್ದಾರೆ. ಬಿಡದಿಯ ರೈತ ವಿರೋಧಿ ಭೂಸ್ವಾಧೀನ ನೀತಿ, ನೈಸ್ ಯೋಜನೆಯ ಅಕ್ರಮಗಳು, ಕೆಪಿಎಸ್‌ಸಿ ಹಗರಣಗಳು ಮತ್ತು ಯುವ ಜನತೆಗೆ ಮಾಡಿದ ಮೋಸ ಹಾಗೂ ಸ್ವತಃ ಸಿಎಂ ಹುಟ್ಟುಹಾಕಿದ 'ಸ್ಟಿಂಗ್' ಪ್ರಕರಣಗಳ ವಿರುದ್ಧ ಮತದಾರರು ತಮ್ಮ ಆಕ್ರೋಶವನ್ನು ಮತಗಳ ರೂಪದಲ್ಲಿ ಹೊರಹಾಕಿದ್ದಾರೆ ಎಂದು ಅವರು ಸ್ಪಷ್ಟಪಡಿಸಿದರು. ದೇಶದ ಸಮಗ್ರ ಪ್ರಗತಿಗೆ ಪ್ರಧಾನಿ ಮೋದಿ ಕೊಡುಗೆ ಮತ್ತು ಅವರ ವರ್ಚಸ್ಸು ಹಾಗೂ ಎಚ್.ಡಿ.ದೇವೇಗೌಡರ ಪರಿಶ್ರಮ ಮತ್ತು ಜನರಲ್ಲಿದ್ದ ಅವರ ಮೇಲಿನ ಒಲವು ಈ ಗೆಲುವಿಗೆ ಪ್ರಮುಖ ಅಡಿಪಾಯ ಎಂದರು.

ಮತದಾರರ ತೀರ್ಮಾನ ಗೌರವಿಸುತ್ತೇವೆ-ಡಿಕೆ ಶಿವಕುಮಾರ್

ಒಂದನೇ ಪುಟದಿಂದ......

ಬೆಂಗಳೂರು ಶಿಕ್ಷಕರ ಕ್ಷೇತ್ರದ ಫಲಿತಾಂಶ ನಿರೀಕ್ಷಿಸಿರಲಿಲ್ಲ. ಈ ಬಗ್ಗೆ ಪರಿಶೀಲನೆ ಮಾಡುತ್ತೇವೆ ಎಂದರು. ಬಿಜೆಪಿ ಮತ್ತು ಜೆಡಿಎಸ್‌ನವರು, 'ಇದು ಭವಿಷ್ಯದ ಮುನ್ಸೂಚನೆ ಎನ್ನುತ್ತಿದ್ದಾರೆ. ಆದರೆ, ಚನ್ನಪಟ್ಟಣ ಮತ್ತು ಶಿಗ್ಗಾಂವಿ ಬಗ್ಗೆ ಏನು ಉತ್ತರ ಕೊಡುತ್ತಾರೆ? ಅದು ಕೂಡ ಮುನ್ಸೂಚನೆಯೇ ಅಲ್ಲವೇ? ಎಂದು ಪ್ರಶ್ನಿಸಿದ ಅವರು, ನಾವು ಕಲಿಯಬೇಕಾದ ವಿಚಾರಗಳಿವೆ. ಈ ಬಗ್ಗೆ ಪರಿಶೀಲಿಸಿ, ನಮ್ಮ ಕಾರ್ಯಕರ್ತರನ್ನು ಹೇಗೆ ರಚನಾ ಮಾಡಬೇಕೆಂದೂ ತಿಳಿದಿದೆ ಎಂದು ಪ್ರತಿಕ್ರಿಯಿಸಿದರು. ನಾಲ್ಕು ವಿಧಾನ ಪರಿಷತ್ ಸ್ಥಾನಗಳ ಚುನಾವಣೆಯನ್ನು ಸಂಪೂರ್ಣವಾಗಿ ಮತಪತ್ರದ ಮೂಲಕವೇ ನಡೆಸಲಾಗಿದ್ದರೂ ಕಾಂಗ್ರೆಸ್ ಸೋತಿ ದ್ದರೂ ಮತ ಪತ್ರದ ಮೂಲಕ ಚುನಾವಣೆಯ ಅಗತ್ಯವಿದೆ ಎಂದರು.

ಶ್ರೀಮಂತ ಸಾಂಸ್ಕೃತಿಕ ಪರಂಪರೆಗೆ ಅರ್ಥಪೂರ್ಣ ನಮನ: 'ಇಂದ್ರಿಯಾ' ಆಭರಣ ಬ್ರ್ಯಾಂಡ್‌ನಿಂದ ಸುಸ್ಥಿರ 'ಆಭರಣ ರಂಗವಲ್ಲಿ' ಅನಾವರಣ



ಮಂಗಳೂರು : ಆದಿತ್ಯ ಬಿರ್ಲಾ ಸಮೂಹದ ಪ್ರಮುಖ ಹಾಗೂ ಪ್ರತಿಷ್ಠಿತ ಆಭರಣ ಬ್ರ್ಯಾಂಡ್ 'ಇಂದ್ರಿಯಾ', ಭಾರತದ ಶ್ರೀಮಂತ ಸಾಂಸ್ಕೃತಿಕ ಪರಂಪರೆ ಮತ್ತು ಪಾರಂಪರಿಕ ಹಬ್ಬಗಳ ಆಚರಣೆಗೆ ಅರ್ಥಪೂರ್ಣ ಗೌರವ ಸಲ್ಲಿಸುವ ನಿಟ್ಟಿನಲ್ಲಿ ಸುಸ್ಥಿರ 'ಆಭರಣ ರಂಗವಲ್ಲಿ'ಯನ್ನು ಅನಾವರಣ ಮಾಡಿದೆ. ನಗರಾಭಿವೃದ್ಧಿ ಹಾಗೂ ಸಾಂಸ್ಕೃತಿಕ ಪರಂಪರೆಯ ಸಮ್ಮಿಲನವಾಗಿ, ಬೆಂಗಳೂರಿನ ಪ್ರಸಿದ್ಧ ಒರಾಯನ್ ಮಾಲ್ ಹಾಗೂ ತ್ಯಾಗರಾಜನಗರದ ಶ್ರೀ ಸತ್ಯ ಗಣಪತಿ ಶಿರಡಿ ಸಾಯಿಬಾಬಾ ದೇವಸ್ಥಾನದ ಆವರಣದಲ್ಲಿ ಈ ಬೃಹತ್ ರಂಗೋಲಿ ಕಲಾಕೃತಿಯನ್ನು ಸಾರ್ವಜನಿಕ ಪ್ರದರ್ಶನಕ್ಕೆ ಮುಕ್ತಗೊಳಿಸಲಾಗಿದೆ. ವಿಜಯದಶಮಿಯ ಪವಿತ್ರ ಹಬ್ಬದ ಸಂದರ್ಭದಲ್ಲಿ ನಿರ್ಮಾಣಗೊಂಡಿರುವ ಈ ಬೃಹತ್ ರಂಗೋಲಿಯು ಒಟ್ಟು 1,600 ಚದರ ಅಡಿ ವಿಸ್ತೀರ್ಣದಲ್ಲಿ ವಿಸ್ತರಿಸಿದೆ. ಸಂಸ್ಥೆಯ ಹಬ್ಬದ ವಿಶೇಷ ಆಭರಣ ಸಂಗ್ರಹವಾದ 'ಪದ್ಮಿಕಾ' ಸರಣಿಯ ವಿಶಿಷ್ಟ ಶೈಲಿಯಿಂದ ಸ್ಫೂರ್ತಿ ಪಡೆದು ಇದನ್ನು ರೂಪಿಸಲಾಗಿದೆ. 22 ಕ್ಯಾರೆಟ್ ಅಪರಂಜಿ ಚಿನ್ನದ 'ಪದ್ಮಿಕಾ' ಸರಣಿಯ ಪ್ರಾಚೀನ 'ಗುಲಾಬಿ ಮೀನಾಕಾರಿ' (Gulabi Meenakari) ಎನಾಮೆಲ್ ಕಲೆಗೆ ಮರುಜೀವ ನೀಡುವ ಜೊತೆಗೆ, ಕಮಲದ ಮೇಲೆ ಆಸೀನಳಾಗಿರುವ ಲಕ್ಷ್ಮೀ ದೇವಿಯ ಮಂಗಳಕರ ಆಕೃತಿಯನ್ನು ಒಳಗೊಂಡಿದೆ. ಖ್ಯಾತ ರಂಗೋಲಿ ಕಲಾವಿದೆ ಮತ್ತು '3ಡಿ ರಂಗೋಲಿ ಕ್ವೀನ್' ಎಂದೇ ಜನಪ್ರಿಯರಾಗಿರುವ ಶಿಖಾ ಶರ್ಮಾ ಅವರ ಕಲಾತ್ಮಕ ನೈಪುಣ್ಯತೆಯಲ್ಲಿ ಈ ಬೃಹತ್ ರಂಗವಲ್ಲಿ ಅರಳಿದೆ. ಟೆಂಪಲ್ ಜ್ಯುವೆಲ್ಲರಿಯ ನವಿರಾದ ನಕ್ಕೆ ಕೆತ್ತನೆಗಳನ್ನು ವಿವಿಧ ಸಿರಿಧಾನ್ಯಗಳು ಹಾಗೂ ನೈಸರ್ಗಿಕ ಕಾಳುಗಳನ್ನು ಬಳಸಿ ಕಲಾತ್ಮಕವಾಗಿ ಮರುಸೃಷ್ಟಿಸಲಾಗಿದೆ.

ಯುವ ಸಂಸತ್-ನೋಂದಣಿಗೆ ಆಹ್ವಾನ

ಮಂಗಳೂರು – ಭಾರತ ಸರ್ಕಾರದ ಯುವ ವ್ಯವಹಾರಗಳು ಮತ್ತು ಕ್ರೀಡಾ ಸಚಿವಾಲಯದ ಆಶ್ರಯದಲ್ಲಿ, ಮೈ ಭಾರತ್ – ದಕ್ಷಿಣ ಕನ್ನಡ ಸಂಸ್ಥೆಯು ಮಂಗಳೂರು ವಿಶ್ವವಿದ್ಯಾನಿಲಯ, ಬೆಸೆಂಟ್ ಮಹಿಳಾ ಕಾಲೇಜು ಹಾಗೂ ರಾಷ್ಟ್ರೀಯ ಸೇವಾ ಯೋಜನೆ ಸಹಯೋಗದೊಂದಿಗೆ ಜಿಲ್ಲಾ ಮಟ್ಟದ "ವಿಕಸಿತ ಭಾರತ ಯುವ ಸಂಸತ್ 2027" ಕಾರ್ಯಕ್ರಮವನ್ನು ನವೆಂಬರ್ 7 ರಂದು ಬೆಳಿಗ್ಗೆ 9:30 ರಿಂದ ನಗರದ ಬೆಸೆಂಟ್ ಮಹಿಳಾ ಕಾಲೇಜಿನಲ್ಲಿ ಆಯೋಜಿಸಲಾಗುತ್ತದೆ. ಹೆಚ್ಚಿನ ಮಾಹಿತಿಗಾಗಿ ದೂ.ಸಂ: 9961332968 / 0824-2422264 ಸಂಪರ್ಕಿಸ ಬಹುದು ಎಂದು ಮೈ ಭಾರತ್ ಉಪ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ತರಬೇತಿ

ಮಂಗಳೂರು-ವಿವಿಧ ಬ್ಯಾಂಕಿಂಗ್, ಎಸ್‌ಎಸ್‌ಸಿ, ಹಾಗೂ ಆರ್‌ಆರ್‌ಬಿ ಹುದ್ದೆಗಳ ನೇಮಕಾತಿ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರದ ವತಿಯಿಂದ, 45 ದಿನಗಳ ಕಾಲದ ತರಬೇತಿಯನ್ನು ನೀಡಲಾಗುತ್ತದೆ. ಆಸಕ್ತರು ಅಕ್ಟೋಬರ್ 31 ರೊಳಗಾಗಿ ಹೆಸರನ್ನು ನೋಂದಾಯಿಸಿಕೊಳ್ಳಲು 0821-2515944 ದೂರವಾಣಿ ಸಂಖ್ಯೆಯನ್ನು ಸಂಪರ್ಕಿಸಬಹುದು ಎಂದು ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಕುಲಸಚಿವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಉಚಿತ ಅಣಬೆ ಬೇಸಾಯ ತರಬೇತಿ

ಶಿವಮೊಗ್ಗ : ಬೆಂಗಳೂರು ಗ್ರಾಮಾಂತರ ಜಿಲ್ಲೆ ಹೊಸಕೋಟೆ ತಾಲ್ಲೂಕು ಸೊಣ್ಣಹಳ್ಳಿಪುರದಲ್ಲಿರುವ ಕೆನರಾ ಬ್ಯಾಂಕ್ ಗ್ರಾಮೀಣ ಸ್ವ ಉದ್ಯೋಗ ತರಬೇತಿ ಸಂಸ್ಥೆಯಲ್ಲಿ ದಿನಾಂಕ: 12.11.2026ರಿಂದ 10 ದಿನಗಳ ಕಾಲ ನಿರುದ್ಯೋಗಿ ಪುರುಷರಿಗೆ ಮತ್ತು ಮಹಿಳೆಯರಿಗೆ ಉಚಿತ ಅಣಬೆ ಬೇಸಾಯ ತರಬೇತಿ ಶಿಬಿರವನ್ನು ಏರ್ಪಡಿಸಿದೆ. ಸಂದರ್ಶನಕ್ಕೆ ಹಾಜರಾಗಲು ಅಸಾಧ್ಯವಾದಲ್ಲಿ ದಿನಾಂಕ: 12/11/2026 ರೊಳಗೆ ಸಂಸ್ಥೆಯನ್ನು ಈ ಕೆಳಕಂಡ ದೂರವಾಣಿ ಸಂಖ್ಯೆ 8970476050, 63631 39123, 9591514154, 9686248369, 9886935603ಗಳಿಗೆ ಸಂಪರ್ಕಿಸಿ ತಮ್ಮ ಹೆಸರನ್ನು ನೋಂದಾಯಿಸಿಕೊಳ್ಳಬಹುದೆಂದು ಸಂಸ್ಥೆಯ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ತಾಂತ್ರಿಕ ಹುದ್ದೆಗೆ ಅರ್ಜಿ ಆಹ್ವಾನ

ಶಿವಮೊಗ್ಗ : ಮೈಸೂರು ಕೇಂದ್ರೀಯ ಆಹಾರ ತಾಂತ್ರಿಕ ಸಂಶೋಧನಾಲಯವು 28 ತಾಂತ್ರಿಕ ಹುದ್ದೆಗಳಿಗೆ ಅರ್ಜಿಗಳನ್ನು ಆಹ್ವಾನಿಸಿದ್ದು, 28 ಹುದ್ದೆಗಳಲ್ಲಿ ಪೈಕಿ ಫಿಟ್ಟರ್ ಮತ್ತು ಎಲೆಕ್ಟ್ರಾನಿಕ್ ಮೆಕಾನಿಕ್ ವಿದ್ಯಾರ್ಹತೆಯ ಆಧಾರದ ಮೇಲೆ 02 ಹುದ್ದೆಗಳನ್ನು ಮಾಜಿ ಸೈನಿಕರಿಗೆ ಮೀಸಲಿರಿಸಿದ್ದಾರೆ. ಈ ಹುದ್ದೆಗಳಿಗೆ ಅರ್ಜಿ ಸಲ್ಲಿಸಲಿಚ್ಛಿಸುವ ಮಾಜಿ ಸೈನಿಕರು ದಿನಾಂಕ 18/11/2026 ರೊಳಗಾಗಿ https://cftri.res.in ಅಥವಾ https://recruitment.cftri.res.in ಎಂಬ ಜಾಲತಾಣದಲ್ಲಿ ಆನ್‌ಲೈನ್ ಅರ್ಜಿಗಳನ್ನು ಸಲ್ಲಿಸಬಹುದಾಗಿದೆ ಎಂದು ಹೆಚ್ಚಿನ ಮಾಹಿತಿಗಾಗಿ ಮೇಲೆ ತಿಳಿಸಲಾಗಿರುವ ಜಾಲತಾಣವನ್ನು ಸಂಪರ್ಕಿಸಬಹುದಾಗಿದೆ ಎಂದು ಶಿವಮೊಗ್ಗ ಸೈನಿಕ ಕಲ್ಯಾಣ ಮತ್ತು ಪುನರ್ವಸತಿ ಇಲಾಖೆಯ ಉಪ ನಿರ್ದೇಶಕ ಪಿ.ಎ. ಹಿರೇಮಠ ತಿಳಿಸಿರುತ್ತಾರೆ.

ನವೆಂಬರ್ 30ರವರೆಗೆ ದೇಶಾದ್ಯಂತ ಬಿಜೆಪಿ ಅಭಿಯಾನ: ಸಿ.ಟಿ. ರವಿ

ಮಂಗಳೂರು : ನವೆಂಬರ್ 30ರವರೆಗೆ ಭಾರತೀಯ ಜನತಾ ಪಾರ್ಟಿ ದೇಶದಾದ್ಯಂತ 'ಪ್ರಜಾಪ್ರಭುತ್ವ ಉಳಿಸಿ, ಅರಾಜಕತೆ ತೊಲಗಿಸಿ, ಸಂವಿಧಾನ ರಕ್ಷಿಸಿ' ಎನ್ನುವ ಬೃಹತ್ ಅಭಿಯಾನವನ್ನು ಹಮ್ಮಿಕೊಂಡಿದೆ ಎಂದು ತಿಳಿಸಿದ್ದಾರೆ. ಅಭಿಯಾನದ ಅಂಗವಾಗಿ ಯಾತ್ರೆಗಳು, ಪಾದಯಾತ್ರೆ, ವಿದ್ಯಾರ್ಥಿಗಳ ಜೊತೆ ಸಂವಾದ ಮತ್ತು ಪ್ರಬುದ್ಧರ ಗೋಷ್ಠಿಗಳನ್ನು ಹಮ್ಮಿಕೊಳ್ಳಲಾಗಿದೆ ಎಂದು ಮಂಗಳೂರು ಬಿಜೆಪಿ ಕಚೇರಿಯಲ್ಲಿ ನಡೆದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಬಿಜೆಪಿ ನಾಯಕ ಸಿ.ಟಿ. ರವಿ ತಿಳಿಸಿದರು. ಸಾಂವಿಧಾನಿಕ ಸಂಸ್ಥೆಗಳನ್ನು ಗುರಿಯಾಗಿಸಿಕೊಂಡು ಅಪಪ್ರಚಾರ ಮಾಡುತ್ತಿರುವ ಷಡ್ಯಂತ್ರದ ವಿರುದ್ಧ ಜನಾಭಿಪ್ರಾಯ ಮೂಡಿಸುವುದು ಇದರ ಮುಖ್ಯ ಉದ್ದೇಶವಾಗಿದ್ದು, ನೇಪಾಳ, ಬಾಂಗ್ಲಾದೇಶ ಹಾಗೂ ಶ್ರೀಲಂಕಾದಲ್ಲಿ ಚುನಾಯಿತ ಸರ್ಕಾರಗಳ ವಿರುದ್ಧ ಅರಾಜಕತೆ ಸೃಷ್ಟಿಸಿ ಬದಲಾಯಿಸಿದ ತಂತ್ರವನ್ನೇ ಭಾರತದಲ್ಲೂ ಪ್ರಯೋಗಿಸಲು ಯತ್ನಿಸಲಾಗುತ್ತಿದೆ. ಆರಂಭದಲ್ಲಿ ಅಸಹಿಷ್ಣುತೆ, ಅವಾರ್ಡ್ ವಾಪಸಿ ನಾಟಕ, ಸಿಎಎ ವಿವಾದ, ಕಿಸಾನ್ ಆಂದೋಲನದ ಹೆಸರಿನಲ್ಲಿ ಕೆಂಪುಕೋಟೆಯ ಮೇಲೆ ಖಾಲಿಸ್ತಾನ್ ಧ್ವಜ ಹಾರಿಸುವ ಯತ್ನಗಳು ನಡೆದಿದ್ದವು. ಇವೆಲ್ಲವೂ ವಿಫಲಗೊಂಡ ಬಳಿಕ ಈಗ ಇವಿಎಂ ಹ್ಯಾಕಿಂಗ್ ಮತ್ತು ಎಸ್‌ಐಆರ್ ವಿಚಾರದಲ್ಲಿ ದೇಶಾದ್ಯಂತ ಅಪಪ್ರಚಾರ ನಡೆಸಲಾಗುತ್ತಿದೆ ಎಂದು ಆರೋಪಿಸಿದರು.

ಅಭಿವೃದ್ಧಿ ಕಾಮಗಾರಿಗೆ ಶಾಸಕ ವೇದವ್ಯಾಸ ಕಾಮತ್ ಶಂಕುಸ್ಥಾಪನೆ

ಮಂಗಳೂರು: ಮಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯ 53ನೇ ಬಜಾಲ್ ವಾರ್ಡ್‌ಗೆ ಒಳಪಡುವ ಪೂವರ ಕೆರೆ ರಸ್ತೆಯಿಂದ ಕಲ್ಲುಗುಡ್ಡೆವರೆಗಿನ ರಸ್ತೆ ಅಭಿವೃದ್ಧಿ ಕಾಮಗಾರಿಗೆ ಮಂಗಳೂರು ನಗರ ದಕ್ಷಿಣ ಶಾಸಕ ಡಿ. ವೇದವ್ಯಾಸ ಕಾಮತ್ ಅವರು ಗುದ್ದಲಿ ಪೂಜೆ ನೆರವೇರಿಸುವ ಮೂಲಕ ಚಾಲನೆ ನೀಡಿದರು. ಈ ಯೋಜನೆಯು ಒಟ್ಟು ರೂ. 10 ಲಕ್ಷ ವೆಚ್ಚದಲ್ಲಿ ಕೈಗೆತ್ತಿಕೊಳ್ಳಲಾಗುತ್ತಿದ್ದು, ಪ್ರದೇಶದ ಸಂಪರ್ಕ ವ್ಯವಸ್ಥೆಯನ್ನು ಸುಧಾರಿಸುವ ಗುರಿಯನ್ನು ಹೊಂದಿದೆ. ಈ ಸಂದರ್ಭದಲ್ಲಿ ಮಾತನಾಡಿದ ಶಾಸಕ ವೇದವ್ಯಾಸ ಕಾಮತ್, ಬಜಾಲ್ ಪ್ರದೇಶದ ಪ್ರಮುಖರಾದ ಚಂದ್ರಶೇಖರ್ ಬಜಾಲ್ ಹಾಗೂ ಸ್ಥಳೀಯ ನಿವಾಸಿಗಳ ಸುದೀರ್ಘ ದಿನಗಳ ಬೇಡಿಕೆಯಂತೆ ಈ ಅಭಿವೃದ್ಧಿ ಕಾಮಗಾರಿ ನ್ನು ಹಮ್ಮಿಕೊಳ್ಳಲಾಗಿದೆ ಎಂದು ತಿಳಿಸಿದರು. ಸ್ಥಳೀಯರ ಸಹಕಾರದೊಂದಿಗೆ ಕಾಮಗಾರಿಯನ್ನು ಗುಣಮಟ್ಟದಿಂದ ಹಾಗೂ ಶೀಘ್ರವಾಗಿ ಪೂರ್ಣಗೊಳಿಸಿ ಸಾರ್ವಜನಿಕರ ಬಳಕೆಗೆ ಮುಕ್ತಗೊಳಿಸಲಾಗುವುದು ಎಂದು ಭರವಸೆ ನೀಡಿದರು. ಶಂಕುಸ್ಥಾಪನೆ ಸಮಾರಂಭದಲ್ಲಿ ಸ್ಥಳೀಯ ಪ್ರಮುಖರಾದ ಕಿರಣ್ ರೈ, ಸುಕೇಶ್ ಅಳಪೆ, ಪಕ್ಷದ ವಿವಿಧ ಹಂತದ ಪದಾಧಿಕಾರಿಗಳು, ಬಜಾಲ್ ವಾರ್ಡಿನ ಸಕ್ರಿಯ ಕಾರ್ಯಕರ್ತರು ಹಾಗೂ ಹೆಚ್ಚಿನ ಸಂಖ್ಯೆಯಲ್ಲಿ ಸ್ಥಳೀಯ ನಿವಾಸಿಗಳು ಉಪಸ್ಥಿತರಿದ್ದು ಕಾಮಗಾರಿಗೆ ಬೆಂಬಲ ಸೂಚಿಸಿದರು.

ಮಂಗಳೂರಿನಲ್ಲಿ 14ನೇ ಆವೃತ್ತಿಯ ಯಕ್ಷಗಾನ ತಾಳಮದ್ದಳೆ

ಮಂಗಳೂರು : 'ಯಕ್ಷಾಂಗಣ ಮಂಗಳೂರು' ಹಾಗೂ ಮಂಗಳೂರು ವಿಶ್ವವಿದ್ಯಾನಿಲಯದ ಡಾ. ದಯಾನಂದ ಪೈ, ಸತೀಶ್ ಪೈ ಯಕ್ಷಗಾನ ಅಧ್ಯಯನ ಕೇಂದ್ರದ ಜಂಟಿ ಆಶ್ರಯದಲ್ಲಿ ಕರ್ನಾಟಕ ರಾಜ್ಯೋತ್ಸವ ಕಲಾ ಸಂಭ್ರಮದ ಅಂಗವಾಗಿ 14ನೇ ಆವೃತ್ತಿಯ 'ಯಕ್ಷಗಾನ ತಾಳಮದ್ದಳೆ ಸಪ್ತಾಹ – ಚತುರ್ದಶ ಸರಣಿ' ಕಾರ್ಯಕ್ರಮವನ್ನು 2026ರ ನವೆಂಬರ್ 22 ರಿಂದ 28ರವರೆಗೆ ಆಯೋಜಿಸಲಾಗಿದೆ. ನಗರದ ವಿಶ್ವವಿದ್ಯಾಲಯ ಕಾಲೇಜಿನ ರವೀಂದ್ರ ಕಲಾ ಭವನದಲ್ಲಿ ನಿರಂತರ ಏಳು ದಿನಗಳ ಕಾಲ ನಡೆಯಲಿರುವ ಈ 'ಸಂಘಟನಾ ಪರ್ವ' ಸಪ್ತಾಹದಲ್ಲಿ ಜಿಲ್ಲೆಯ ಆಯ್ದ ತಂಡಗಳಿಂದ ಅಪರೂಪದ ಪ್ರಸಂಗಗಳು ಮೂಡಿಬರಲಿವೆ. ಪ್ರಸಂಗಗಳಲ್ಲಿ ಹಿರಿಯ ಯಕ್ಷಗಾನ ಕಲಾವಿದರು ಸಾಂದರ್ಭಿಕವಾಗಿ ಭಾಗವಹಿಸಲಿದ್ದಾರೆ ಎಂದು ಯಕ್ಷಾಂಗಣದ ಕಾರ್ಯಾಧ್ಯಕ್ಷ ಪ್ರೊ. ಭಾಸ್ಕರ ರೈ ಕುಕ್ಕುವಳ್ಳಿ ತಿಳಿಸಿದ್ದಾರೆ. ಬಲ್ಲಿರ ಕುಡ್ಲ ಪೆವಿಲಿಯನ್‌ನಲ್ಲಿ ನಡೆದ ಯಕ್ಷಾಂಗಣದ ಕಾರ್ಯಕಾರಿ ಸಮಿತಿ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು. ನವೆಂಬರ್ 22ರ ಭಾನುವಾರ ಸಂಜೆ 4 ಗಂಟೆಗೆ ಸಪ್ತಾಹದ ಉದ್ಘಾಟನೆ ನಡೆಯಲಿದ್ದು, ಯಕ್ಷಾಂಗಣದ ಗೌರವಾಧ್ಯಕ್ಷ ಡಾ. ಎಜೆ. ಶೆಟ್ಟಿ ಅವರ ಅಧ್ಯಕ್ಷತೆಯಲ್ಲಿ ಮಂಗಳೂರು ವಿಶ್ವವಿದ್ಯಾನಿಲಯದ ಕುಲಪತಿ ಪ್ರೊ. ಪಿ.ಎಲ್. ಧರ್ಮ ಅವರು ಉದ್ಘಾಟಿಸಲಿದ್ದಾರೆ.

ಆಳ್ವಾಸ್ ಕಾನೂನು ಕಾಲೇಜಿನ ಪ್ರಾಂಶುಪಾಲೆ ರಶ್ಮಿ ಶೆಟ್ಟಿಗೆ ಪಿಎಚ್.ಡಿ. ಪದವಿ

ಮೂಡುಬಿದಿರೆ : ಮೂಡುಬಿದಿರೆಯ ಆಳ್ವಾಸ್ ಕಾನೂನು ಕಾಲೇಜಿನ ಪ್ರಾಂಶುಪಾಲೆ ರಶ್ಮಿ ಶೆಟ್ಟಿ ಅವರು ಭಾರತೀಯ ರಾಷ್ಟ್ರೀಯ ಕಾನೂನು ವಿಶ್ವವಿದ್ಯಾಲಯದಿಂದ (NLSIU) ಡಾಕ್ಟರೇಟ್ (ಪಿಎಚ್.ಡಿ.) ಪದವಿ ಪಡೆದುಕೊಂಡಿದ್ದಾರೆ. ಇತ್ತೀಚೆಗೆ ಬೆಂಗಳೂರಿನಲ್ಲಿ ನಡೆದ ಘಟಿಕೋತ್ಸವದಲ್ಲಿ ಭಾರತದ ಮುಖ್ಯ ನ್ಯಾಯಮೂರ್ತಿ ಸೂರ್ಯಕಾಂತ್‌ರವರು ಅವರಿಗೆ ಪದವಿ ಪ್ರದಾನ ಮಾಡಿದರು. ಈ ಸಂದರ್ಭದಲ್ಲಿ ಕರ್ನಾಟಕದ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹಾಗೂ ಹಿರಿಯ ರಂಗಭೂಮಿ ಕಲಾವಿದೆ ಅರುಂಧತಿ ನಾಗ್ ಉಪಸ್ಥಿತರಿದ್ದರು. ರಶ್ಮಿ ಶೆಟ್ಟಿಯವರು 'ರಾಷ್ಟ್ರೀಯ ಆಹಾರ ಭದ್ರತಾ ಕಾಯ್ದೆ 2013ರ ಅನುಷ್ಠಾನ: ಕರ್ನಾಟಕದ ಗ್ರಾಮೀಣ ರಾಮನಗರ ಜಿಲ್ಲೆಯ ಪರಿಶಿಷ್ಟ ಜಾತಿ ಮತ್ತು ಮುಸ್ಲಿಂ ಸಮುದಾಯಗಳ ಅನುಭವಗಳ ಅಧ್ಯಯನ' ಎಂಬ ವಿಷಯದ ಕುರಿತು ಸಂಶೋಧನೆ ನಡೆಸಿದ್ದಾರೆ. ಆಹಾರ ಭದ್ರತೆಗೆ ಸಂಬಂಧಿಸಿದ ಕಾನೂನಿನ ಅನುಷ್ಠಾನವು ಗ್ರಾಮೀಣ ಪ್ರದೇಶಗಳ ಪರಿಶಿಷ್ಟ ಜಾತಿ ಮತ್ತು ಮುಸ್ಲಿಂ ಸಮುದಾಯಗಳ ಮೇಲೆ ಬೀರುವ ಪರಿಣಾಮಗಳು, ಕಾಯ್ದೆಯ ಅನುಷ್ಠಾನದ ಅನುಭವಗಳು ಹಾಗೂ ಅದರ ಸಾಮಾಜಿಕ ಆಯಾಮಗಳನ್ನು ಅಧ್ಯಯನ ಮಾಡುವುದು ಈ ಸಂಶೋಧನೆಯ ಮುಖ್ಯ ಉದ್ದೇಶವಾಗಿತ್ತು. ಅವರು ಭಾರತೀಯ ರಾಷ್ಟ್ರೀಯ ಕಾನೂನು ವಿಶ್ವವಿದ್ಯಾಲಯದ ಪ್ರಾಧ್ಯಾಪಕ ಪ್ರೊ. ಸರಸು ಎಸ್ತರ್ ಥಾಮಸ್ ಅವರ ಮಾರ್ಗದರ್ಶನದಲ್ಲಿ ಈ ಸಂಶೋಧನೆಯನ್ನು ಪೂರ್ಣಗೊಳಿಸಿದ್ದಾರೆ ಎಂದು ಸಂಘಟಕರು ತಿಳಿಸಿದರು.

ಜಮೀನು ಮಂಜೂರಾತಿಗೆ ಎಸ್‌ಕೆಪಿಎ ಯಿಂದ ಐವನ್ ಡಿಸೋಜಾಗೆ ಮನವಿ

ಮಂಗಳೂರು: ಕಳೆದ 36 ವರ್ಷಗಳಿಂದ ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳ ವ್ಯಾಪ್ತಿಯಲ್ಲಿ ಛಾಯಾಗ್ರಾಹಕರ ಹಿತಾಸಕ್ತಿ ಹಾಗೂ ಸಮಾಜಮುಖಿ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡಿರುವ ಸೌತ್ ಕೆನರಾ ಫೋಟೋಗ್ರಾಫರ್ಸ್ ಅಸೋಸಿಯೇಷನ್ (ರಿ.) ಸಂಸ್ಥೆಗೆ ಸ್ವಂತ ಕಟ್ಟಡ ನಿರ್ಮಾಣಕ್ಕಾಗಿ ಸರ್ಕಾರಿ ನಿವೇಶನ ಮಂಜೂರು ಮಾಡುವಂತೆ ವಿಧಾನ ಪರಿಷತ್ ಶಾಸಕ ಐವನ್ ಡಿಸೋಜಾರವರಿಗೆ ಮನವಿ ಸಲ್ಲಿಸಲಾಗಿದೆ. ಸುಮಾರು 4,500ಕ್ಕೂ ಅಧಿಕ ಸದಸ್ಯರನ್ನು ಹೊಂದಿರುವ ಈ ಸಂಸ್ಥೆಯು ಛಾಯಾಗ್ರಾಹಕರ ವೃತ್ತಿಪರ ತರಬೇತಿ, ಶೈಕ್ಷಣಿಕ, ಆರೋಗ್ಯ ಮತ್ತು ಆರ್ಥಿಕ ನೆರವು, ರಕ್ತದಾನ ಶಿಬಿರಗಳಂತಹ ಹಲವು ಸಮಾಜಮುಖಿ ಕಾರ್ಯಕ್ರಮಗಳನ್ನು ನಡೆಸಿಕೊಂಡು ಬರುತ್ತಿದೆ. ಆದರೆ ಸಂಸ್ಥೆಗೆ ಸ್ವಂತ ಕಟ್ಟಡವಿಲ್ಲದ ಕಾರಣ ಸಭೆ ಹಾಗೂ ತರಬೇತಿ ಶಿಬಿರಗಳನ್ನು ಆಯೋಜಿಸಲು ತೊಂದರೆಯಾಗುತ್ತಿದ್ದು, ಜಮೀನು ಮಂಜೂರು ಮಾಡುವಂತೆ ವಿನಂತಿಸಲಾಗಿದೆ. ಸಂಸ್ಥೆಯ ಮನವಿಗೆ ಸ್ಪಂದಿಸಿದ ಶಾಸಕ ಐವನ್ ಡಿಸೋಜಾ ಅವರು, SKPAಯ ಸುದೀರ್ಘ ಸೇವೆ ಹಾಗೂ ಸಮಾಜಮುಖಿ ಕಾರ್ಯಗಳನ್ನು ಪರಿಗಣಿಸಿ ಕಾನೂನಾತ್ಮಕವಾಗಿ ನಿವೇಶನ ಮಂಜೂರು ಮಾಡಲು ಸೂಕ್ತ ಕ್ರಮ ಕೈಗೊಳ್ಳುವಂತೆ ಕಂದಾಯ ಸಚಿವರಾದ ಡಾ. ಜಿ. ಪರಮೇಶ್ವರ್‌ರವರಿಗೆ ಶಿಫಾರಸು ಮಾಡಿದ್ದಾರೆ.

ಮಂಗಳೂರಿನಲ್ಲಿ ಪ್ರಥಮ ವಿಶ್ವ ಕೊಂಕಣಿ ಸಂಗೀತ ಮಹಾಸಮ್ಮೇಳನ

ಮಂಗಳೂರು : ಕೊಂಕಣಿ ಭಾಷೆಯ ಅಗ್ರಗಣ್ಯ ಸಾಂಸ್ಕೃತಿಕ ಸಂಸ್ಥೆಯಾದ 'ಮಾಂಡ್ ಸೊಭಾಣ್' ತನ್ನ 40ನೇ ವರ್ಷಾಚರಣೆಯ (ಮಾಣಿಕ್ಯೋತ್ಸವ) ಸವಿನೆನಪಿಗಾಗಿ ಮಂಗಳೂರಿನಲ್ಲಿ ಅತ್ಯಂತ ವಿಜೃಂಭಣೆಯಿಂದ 'ಪ್ರಥಮ ವಿಶ್ವ ಕೊಂಕಣಿ ಸಂಗೀತ ಮಹಾಸಮ್ಮೇಳನ'ವನ್ನು ಆಯೋಜಿಸಿದೆ ಎಂದು ಮಂಗಳೂರಿನ ಗೋಲ್ಡ್ ಫಿಂಚ್ ಹೋಟೆಲ್ ನಲ್ಲಿ ನಡೆದ ಪತ್ರಿಕಾಗೋಷ್ಠಿಯಲ್ಲಿ ಮಾಂಡ್ ಸೊಭಾಣ್ ಅಧ್ಯಕ್ಷ ಲುವಿ ಜೆ. ಪಿಂಟೊ ತಿಳಿಸಿದರು. ಸಂಸ್ಥೆಯ ಸ್ಥಾಪಕ ಹಾಗೂ ಕೊಂಕಣಿ ರಂಗದ ದಿವಂಗತ ಎರಿಕ್ ಒಝೇರಿಯೊ ಅವರ ಗೌರವಾರ್ಥವಾಗಿ ನವೆಂಬರ್ 30ರಿಂದ 15ರವರೆಗೆ ನಗರದ ಐತಿಹಾಸಿಕ ಪುರಭವನದಲ್ಲಿ (ಟೌನ್ ಹಾಲ್) ಈ 13 ದಿನಗಳ ಬೃಹತ್ ಸಾಂಸ್ಕೃತಿಕ ಹಬ್ಬ ನಡೆಯಲಿದೆ. ಈ ಸಂಭ್ರಮದ ಭಾಗವಾಗಿ ಸತತ 12 ದಿನ, 12 ಗಂಟೆ ಹಾಗೂ 12 ನಿಮಿಷಗಳ ಕಾಲ ಅತೀ ದೀರ್ಘಾವಧಿಯ ಸಮೂಹ ಗಾಯನವನ್ನು ನಡೆಸಿ ಗಿನ್ನೆಸ್ ವಿಶ್ವ ದಾಖಲೆ ಬರೆಯಲು ಭರಪೂರ ಸಿದ್ಧತೆಗಳನ್ನು ಕೈಗೊಳ್ಳಲಾಗಿದೆ. 'ಕೊಂಕಣಿ ನಿರಂತರಿ – ಸಂಸಾರ್ ಸರಸಾರಿ' (ಜಗದ ಕೊನೆಯ ತನಕ ಕೊಂಕಣಿ ಬೆಳಗಲಿ) ಎಂಬ ಉದಾತ್ತ ಆಶಯದೊಂದಿಗೆ ಹಮ್ಮಿಕೊಳ್ಳಲಾಗಿರುವ ಈ ಸಂಗೀತ ಮ್ಯಾರಥಾನ್‌ನಲ್ಲಿ ಕರ್ನಾಟಕ, ಕೇರಳ, ಮಹಾರಾಷ್ಟ್ರ, ಗೋವಾ ಹಾಗೂ ಮುಂಬೈ ಸೇರಿದಂತೆ ಭಾರತದ ವಿವಿಧ ಭಾಗಗಳಿಂದ ಮಾತ್ರವಲ್ಲದೆ ಆಸ್ಟ್ರೇಲಿಯಾ, ಕುವೈತ್, ಓಮನ್, ಖತಾರ್ ಮುಂತಾದ ವಿದೇಶಗಳಿಂದಲೂ ಕಲಾವಿದರು ಮಂಗಳೂರಿಗೆ ಆಗಮಿಸಲಿದ್ದಾರೆ ಎಂದು ಅವರು ಹೇಳಿದರು.

ಪೂವಮ್ಮಗೆ ಪ್ರತಿಷ್ಠಿತ 'ರೋಟರಿ ವಂದನಾ ಪ್ರಶಸ್ತಿ – 2026-27' ಗೌರವ

ಮಂಗಳೂರು: ಭಾರತೀಯ ಮಹಿಳಾ 4X400 ಮೀಟರ್ಸ್ ರಿಲೇ ತಂಡದ ಪ್ರಮುಖ ಅಥ್ಲೀಟ್, ಏಷ್ಯನ್ ಗೇಮ್ಸ್ 2026ರ ಚಿನ್ನದ ಪದಕ ವಿಜೇತೆ ಹಾಗೂ ಅರ್ಜುನ ಪ್ರಶಸ್ತಿ ಪುರಸ್ಕೃತರಾದ ಮಂಗಳೂರಿನ (ದಕ್ಷಿಣ ಕನ್ನಡ ಜಿಲ್ಲೆ) ಕ್ರೀಡಾಪಟು ಶ್ರೀಮತಿ ಪೂವಮ್ಮ ಅವರಿಗೆ ಕ್ರೀಡಾ ಕ್ಷೇತ್ರದಲ್ಲಿ ಸಲ್ಲಿಸಿದ ಅಪಾರ ಕೊಡುಗೆ ಮತ್ತು ಅತ್ಯುತ್ತಮ ಸಾಧನೆಯನ್ನು ಗುರುತಿಸಿ 2026-27ನೇ ಸಾಲಿನ ಪ್ರತಿಷ್ಠಿತ ರಾಜ್ಯಮಟ್ಟದ 'ರೋಟರಿ ವಂದನಾ ಪ್ರಶಸ್ತಿ' ಘೋಷಿಸಲಾಗಿದೆ. ಏಷ್ಯನ್ ಗೇಮ್ಸ್ ಹಾಗೂ ಒಲಿಂಪಿಕ್ ಅಥ್ಲೆಟಿಕ್ ಕೂಟಗಳಲ್ಲಿ ಭಾರತವನ್ನು ಪ್ರತಿನಿಧಿಸಿ ದೇಶಕ್ಕೆ ಕೀರ್ತಿ ತಂದಿರುವ ಪೂವಮ್ಮ ಅವರಿಗೆ, ರೋಟರಿ ಕ್ಲಬ್ ಆಫ್ ಮಂಗಳೂರು ಸೆಂಟ್ರಲ್ ಮತ್ತು ರೋಟರಾಕ್ಟ್ ಕ್ಲಬ್ ಆಫ್ ಮಂಗಳೂರು ಸಿಟಿ ಸಂಸ್ಥೆಗಳು ಜಂಟಿಯಾಗಿ ಈ ಗೌರವವನ್ನು ಅರ್ಪಿಸುತ್ತಿವೆ. ಈ ಪ್ರಶಸ್ತಿಯು ಪ್ರಶಸ್ತಿ ಪತ್ರ, ಸ್ಮರಣಿಕೆ ಹಾಗೂ ಫಲಕಗಳನ್ನು ಒಳಗೊಂಡಿರುತ್ತದೆ. ಅಕ್ಟೋಬರ್ 30ರಂದು ಮಂಗಳೂರಿನ ಹೋಟೆಲ್ ಸೀ ವ್ಯೂನಲ್ಲಿ ಆಯೋಜಿಸಲಾಗಿರುವ ವರ್ಣರಂಜಿತ ಸಮಾರಂಭದಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಗುವುದು. ಭಾರತದ ಮಾಜಿ ಒಲಿಂಪಿಯನ್ ಹಾಗೂ ಅರ್ಜುನ ಪ್ರಶಸ್ತಿ ವಿಜೇತರಾದ ಶ್ರೀಮತಿ ವಂದನಾ ಶಾನ್‌ಭಾಗ್ ಮುಖ್ಯ ಅತಿಥಿಗಳಾಗಿ ಭಾಗವಹಿಸಿ, ಪ್ರಶಸ್ತಿ ಪುರಸ್ಕರಿಸಿ ತರಾದ ಪೂವಮ್ಮರನ್ನು ಸನ್ಮಾನಿಸಲಿದ್ದಾರೆ.

ವಿದ್ಯಾರ್ಥಿ ಅಬ್ದುಲ್ ರಶೀದ್‌ಗೆ 1ಲಕ್ಷ ರೂ.ಬಹುಮಾನ

ಮಂಗಳೂರು : ಮಂಗಳೂರು ಧರ್ಮಪ್ರಾಂತ್ಯದ ಪರಿಸರ ಆಯೋಗದ ವತಿಯಿಂದ ಧರ್ಮಪ್ರಾಂತ್ಯದ ವ್ಯಾಪ್ತಿಯ 124 ಧರ್ಮಕ್ಷೇತ್ರಗಳಲ್ಲಿ ಆಯೋಜಿಸಲಾಗಿದ್ದ 'ನಮ್ಮ ಉಳಿವಿಗಾಗಿ ಪ್ರತಿಜ್ಞಾ ಆಂದೋಲನ 2026' ಪರಿಸರ ಜಾಗೃತಿ ಅಭಿಯಾನ ನವು ಅಭೂತಪೂರ್ವ ಯಶಸ್ಸು ಕಂಡಿದೆ. ಈ ಬೃಹತ್ ಆಂದೋಲನದಲ್ಲಿ ಒಟ್ಟು 1,36,966 ಮಂದಿ ಭಾಗವಹಿಸಿ ಪರಿಸರ ಸಂರಕ್ಷಣೆಯ ಪ್ರತಿಜ್ಞೆ ಸ್ವೀಕರಿಸಿದ್ದಾರೆ. ಅಭಿಯಾನ ನದ ಸಮಾರೋಪ ಸಮಾರಂಭವು ಅಕ್ಟೋಬರ್ 25ರಂದು ಸುರತ್ಕಲ್ ಚರ್ಚ್ ಸಭಾಂಗಣದಲ್ಲಿ ವೈಭವದಿಂದ ನೆರವೇರಿತು. ಅಭಿಯಾನದಲ್ಲಿ ಪ್ರತಿಜ್ಞಾ ಪತ್ರಕ್ಕೆ ಸಹಿ ಹಾಕಿದವರ ಪೈಕಿ ಲಾಟರಿ ಮೂಲಕ ವಿಜೇತರನ್ನು ಆಯ್ಕೆ ಮಾಡಲಾಯಿತು. ಮಂಗಳೂರು ಧರ್ಮಪ್ರಾಂತ್ಯದ ಬಿಷಪ್ ಅತಿ ವಂ. ಡಾ. ಪೀಟರ್ ಪಾವ್ಲ್ ಸಲ್ದಾನ್ಹಾ ಅವರು ಲಾಟರಿ ಎತ್ತುವ ಮೂಲಕ ವಿಜೇತರನ್ನು ಘೋಷಿಸಿದರು. ಕಣಚೂರು ವೈದ್ಯಕೀಯ ಕಾಲೇಜಿನ ಪ್ರಥಮ ವರ್ಷದ ಎಂ.ಬಿ.ಬಿ.ಎಸ್. ವಿದ್ಯಾರ್ಥಿ ಹಾಗೂ ಪಂಜಿ ಮುಗೇರ್ ನಿವಾಸಿ ಅಬ್ದುಲ್ ರಶೀದ್ ಅವರಿಗೆ 1 ಲಕ್ಷ ರೂ. ನಗದು ಬಹುಮಾನಕ್ಕೆ ಭಾಜನರಾದರು. ಅಕ್ಟೋಬರ್ 26ರಂದು ಬಿಷಪ್ ನಿವಾಸದಲ್ಲಿ ನಡೆದ ಕಾರ್ಯಕ್ರಮದಲ್ಲಿ ಬಹುಮಾನ ಹಸ್ತಾಂತರಿಸಲಾಯಿತು.

ಕದ್ರಿ ಉದ್ಯಾನವನದಲ್ಲಿ ಮೂರು ದಿನಗಳ 'ಸಿರಿ ಸಸ್ಯೋತ್ಸವ'

ಮಂಗಳೂರು : ಮಂಗಳೂರಿನ ಕದ್ರಿ ಉದ್ಯಾನವನದಲ್ಲಿ ತೋಟಗಾರಿಕೆ ಇಲಾಖೆಯ ವತಿಯಿಂದ ಮೂರು ದಿನಗಳ ಕಾಲ 'ಸಿರಿ ಸಸ್ಯೋತ್ಸವ' ಕಾರ್ಯಕ್ರಮವನ್ನು ಆಯೋಜಿಸಲಾಗಿದೆ ಎಂದು ತೋಟಗಾರಿಕೆ ಉಪನಿರ್ದೇಶಕ ಪ್ರವೀಣ್ ತಿಳಿಸಿದರು. ಪತ್ರಿಕಾಭವನದಲ್ಲಿ ನಡೆದ ಪತ್ರಿಕಾಗೋಷ್ಠಿಯಲ್ಲಿ ಈ ಬಗ್ಗೆ ಮಾಹಿತಿ ನೀಡಿದ ಅವರು, ಔಷಧೀಯ ಸಸ್ಯಗಳ ಬಗ್ಗೆ ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸುವುದು, ಸ್ಥಳೀಯ ಸಸ್ಯ ವೈವಿಧ್ಯತೆಯನ್ನು ಪರಿಚಯಿಸುವುದು, ಮನೆಗಳಲ್ಲಿ ಗಿಡಗಳನ್ನು ಬೆಳೆಸಲು ಪ್ರೋತ್ಸಾಹಿಸುವುದು ಹಾಗೂ ಸುಸ್ಥಿರ ಕೃಷಿ ಮತ್ತು ಪ್ರಕೃತಿ ಸಂರಕ್ಷಣೆಯನ್ನು ಉತ್ತೇಜಿಸುವುದು ಈ ಪ್ರದರ್ಶನದ ಮುಖ್ಯ ಉದ್ದೇಶವಾಗಿದೆ.

ಸುದ್ಧಿ ತುಣುಕು

ಕೆಎಸ್‌ಆರ್‌ಪಿ ಕಾನ್ಸ್‌ಟೇಬಲ್ ಹುದ್ದೆಗಳ ನೇಮಕಾತಿಗಾಗಿ ನಡೆದ ಪರೀಕ್ಷೆಯಲ್ಲಿ 25 ಅಂಕ ಗಳಿಸಿದ್ದ ಅಭ್ಯರ್ಥಿಯೊಬ್ಬರು, ಇತ್ತೀಚೆಗೆ ನಡೆದ ಗ್ರಾಮ ಲೆಕ್ಕಾಧಿಕಾರಿ (VAO) ಪರೀಕ್ಷೆಯಲ್ಲಿ 151 ಅಂಕಗಳಿಸಿದ್ದು, ಇದೀಗ ಚರ್ಚೆಗೆ ಗ್ರಾಸವಾಗಿದೆ.

ಚಾಮರಾಜನಗರದ ಪೊಲೀಸ್ ಗಣಪತಿಯ ಮೆರವಣಿಗೆಯಲ್ಲಿ ಸಾರ್ವಜನಿಕರು ಕಟ್ಟಡಗಳ ಮೇಲಿಂದ ಗಣೇಶನ ಮೆರವಣಿಗೆ ವೀಕ್ಷಿಸುವುದನ್ನು ನಿಷೇಧಿಸಲಾಗಿದೆ.

ರಾಜಧಾನಿಯ ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹದ ಸುರಕ್ಷತೆ, ವಿಸ್ತರಣೆ ಮತ್ತು ಸಿಬ್ಬಂದಿ ವಸತಿ ಗೃಹ ನಿರ್ಮಾಣಕ್ಕಾಗಿ ನಡೆಸಲಾಗಿರುವ ಭೂಸ್ವಾಧೀನ ಪ್ರಕ್ರಿಯೆಯನ್ನು ಹೈಕೋರ್ಟ್‌ನ ವಿಭಾಗೀಯ ಪೀಠ ಎತ್ತಿ ಹಿಡಿದಿದೆ.

ಉಪ ಲೋಕಾಯುಕ್ತರಾದ ನ್ಯಾಯಮೂರ್ತಿ ಬಿ. ವೀರಪ್ಪ ಅವರು ಬೆಳಗಾವಿಯ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗೆ ಭೇಟಿ ನೀಡಿ ಪರಿಶೀಲಿಸಿದ್ದಾರೆ. ಈ ವೇಳೆ ತೂಕದಲ್ಲಿ ಆಗುತ್ತಿರುವ ಮೋಸ, ಹೆಚ್ಚಿನ ಕಮಿಷನ್ ತೆಗೆದುಕೊಳ್ಳುತ್ತಿರುವ ಬಗ್ಗೆ ತೀವ್ರ ಅಸಮಾಧಾನ ವ್ಯಕ್ತವಾಗಿದೆ.

ಪಾಕಿಸ್ತಾನ್ ಜಿಂದಾಬಾದ್ ಕೂಗಿದ ಆರೋಪ ಸಂಬಂಧ ಆರೋಪಿ ವಿರುದ್ಧದ ಕ್ರಿಮಿನಲ್ ಪ್ರಕರಣವನ್ನು ಹೈಕೋರ್ಟ್ ರದ್ದುಪಡಿಸಿದೆ.

ಪ್ರಧಾನಿ ನರೇಂದ್ರ ಮೋದಿ ದೇಶಕ್ಕೆ ನೀಡಿರುವ ಸಮರ್ಪಣೆ ಮತ್ತು ನಿಷ್ಕಲ್ಮಶ ಸೇವೆಗಾಗಿ ಅವರಿಗೆ ಭಾರತ ರತ್ನ ಪ್ರಶಸ್ತಿಯನ್ನು ನೀಡಬೇಕು ಎಂದು ಬಿಜೆಪಿ ರಾಜ್ಯಸಭಾ ಸಂಸದ ವಿಕ್ರಮ್‌ಜಿತ್ ಸಿಂಗ್ ಸಾಹ್ನಿ ಪ್ರಸ್ತಾಪಿಸಿದ್ದಾರೆ.

ಬೆಂಗಳೂರಿನಲ್ಲಿರುವ ಒಟ್ಟು 5,480 ಪಿಜಿಗಳ ಪೈಕಿ ಬರೋಬ್ಬರಿ 3,597 ಪಿಜಿಗಳು ಯಾವುದೇ ಕಾನೂನುಬದ್ಧ ಪರವಾನಗಿ ಇಲ್ಲದೆ (ಲೈಸನ್ಸ್ ರಹಿತ) ನಡೆಯುತ್ತಿರುವುದು ಇತ್ತೀಚೆಗೆ ಬೆಳಕಿಗೆ ಬಂದಿದೆ.

ಬೆಳಗಾವಿ ಜಿಲ್ಲೆಯ ಮೂಡಲಗಿ ತಾಲೂಕಿನ ಗುರ್ಲಾಪುರದ ಬಳಿ ಕಬ್ಬು ಬೆಳೆಗಾರರು ನಡೆಸುತ್ತಿರುವ ಪ್ರತಿಭಟನೆ ಇದೀಗ ಬೃಹತ್ ಜಾತ್ರೆಯ ಸ್ವರೂಪ ಪಡೆದುಕೊಂಡಿದೆ.

ಮಾಜಿ ಶಾಸಕರೊಬ್ಬರದ್ದು ಎನ್ನಲಾದ ಚುಟುಕು ಕಾರ್ಯಾಚರಣೆಯ ವಿಡಿಯೋವನ್ನು ಪ್ರಸಾರ ಮಾಡದಂತೆ ಮಾಧ್ಯಮಗಳಿಗೆ ಹೈಕೋರ್ಟ್ ಮಧ್ಯಂತರ ನಿರ್ಬಂಧ ವಿಧಿಸಿದೆ.

ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಆಡಳಿತ ಯಂತ್ರಕ್ಕೆ ಮೇಜರ್ ಸರ್ಜರಿ ಮಾಡಿದ್ದಾರೆ. ಒಂದೇ ದಿನ ಬರೋಬ್ಬರಿ 87 ಹಿರಿಯ ಮತ್ತು ಕಿರಿಯ ಶ್ರೇಣಿಯ ಕರ್ನಾಟಕ ಆಡಳಿತ ಸೇವೆಯ (ಕೆಎಎಸ್) ಅಧಿಕಾರಿಗಳನ್ನು ವಿವಿಧ ಇಲಾಖೆಗಳಿಗೆ ವರ್ಗಾವಣೆ ಮಾಡಿ ಆದೇಶ ಹೊರಡಿಸಿದ್ದಾರೆ.

ಚುನಾವಣಾ ಆಯೋಗದ ವಿರುದ್ಧ ನವೆಂಬರ್ 1ರಂದು ಚಲೋ ದೆಹಲಿ ರಾಮ್‌ಲೀಮಾ ಮೆರವಣಿಗೆಗೆ ಸಜ್ಜಾಗಿದ್ದು, ಈ ರ್‍ಯಾಲಿಯಲ್ಲಿ ಭಾಗಿಯಾಗುವಂತೆ ದೇಶದ ನಾಗರಿಕರು ಮತ್ತು ವಿದ್ಯಾರ್ಥಿಗಳಿಗೆ ಲೋಕಸಭಾ ವಿಪಕ್ಷ ನಾಯಕ ರಾಹುಲ್ ಗಾಂಧಿ ಕರೆ ನೀಡಿದ್ದಾರೆ.

ಕೇಂದ್ರ ಸರ್ಕಾರಿ ನೌಕರರಿಗೆ ಶೇ 3ರಷ್ಟು ತುಟ್ಟಿ ಭತ್ಯೆ (ಡಿಎ) ಮತ್ತು ಪಿಂಚಣಿದಾರರಿಗೆ ತುಟ್ಟಿ ಪರಿಹಾರ (ಡಿಆರ್) ಹೆಚ್ಚಳಕ್ಕೆ ಕೇಂದ್ರ ಸಚಿವ ಸಂಪುಟ ಅನುಮತಿ ನೀಡಿದೆ. ಈ ಹೆಚ್ಚಳ 2026ರ ಜುಲೈನಿಂದಲೇ ಅನ್ವಯವಾಗುವಂತೆ ಜಾರಿಗೆ ಬರಲಿದೆ.

ಹೈದರಾಬಾದ್ ಮೂಲದ 'ಮಾರ್ಗದರ್ಶಿ ಚಿಟ್ ಫಂಡ್' (Margadarsi Chit Fund), ತಮಿಳುನಾಡಿನಲ್ಲಿರುವ ತನ್ನ ಶಾಖೆಗಳ ಮೂಲಕ ಮಾಸಿಕ 100ಕೋಟಿ ರೂಪಾಯಿ ವಹಿವಾಟು ನಡೆಸುವ ಮೂಲಕ ದಾಖಲೆ ನಿರ್ಮಿಸಿದೆ.

ಭಾರತದ ಜಾಗತಿಕ ಸ್ಥಾನಮಾನ ಮತ್ತು ರಕ್ಷಣಾ ಸನ್ನದ್ಧತೆಗಳು ವೃದ್ಧಿಸಿವೆ ಎಂದು ರಕ್ಷಣಾ ಸಚಿವ ರಾಜನಾಥ್ ಸಿಂಗ್ ಪ್ರತಿಪಾದಿಸಿದ್ದಾರೆ.

ಅವಲಕ್ಕಿ ಪಾಯಸ

ಬೇಕಾಗುವ ಪದಾರ್ಥಗಳು :

ಗಟ್ಟಿ ಅವಲಕ್ಕಿ – 1/2 ಕಪ್
ಕಪ್ ಸಕ್ಕರೆ – 1/2
ಹಾಲು – 2 ಕಪ್
ತುಪ್ಪ – 1 ಚಮಚ
ದ್ರಾಕ್ಷಿ – 7 – 8
ಗೊಡಂಬಿ – 7–8
ಏಲಕ್ಕಿ ಪುಡಿ – ಸ್ವಲ್ಪ

ಮಾಡುವ ವಿಧಾನ :

ಮೊದಲಿಗೆ ಗಟ್ಟಿ ಅವಲಕ್ಕಿಯನ್ನು ತೊಳೆದು ನೀರು ಬಗ್ಗಿಸಿ ಪಕ್ಕಕ್ಕಿಡಬೇಕು. ಈಗ ಒಂದು ಬಾಣಲೆಯಲ್ಲಿ ತುಪ್ಪ ಬಿಸಿಮಾಡಿ, ಗೋಡಂಬಿ ಮತ್ತು ದ್ರಾಕ್ಷಿ ಹುರಿದು ಎತ್ತಿಟ್ಟುಕೊಳ್ಳಬೇಕು. ನಂತರ ಅದೇ ಬಾಣಲೆಗೆ ಹಾಲು ಮತ್ತು ಸಕ್ಕರೆಯನ್ನು ಹಾಕಿ ಕುದಿಯಲು ಪ್ರಾರಂಭವಾದ ಕೂಡಲೇ ತೊಳೆದಿಟ್ಟ ಅವಲಕ್ಕಿ ಹಾಕಿ ಆಗಾಗ ಮಗುಚುತ್ತಾ ಕುದಿಸಬೇಕು. ಅವಲಕ್ಕಿ ಮೆತ್ತಗೆ ಬೇಯುವವರೆಗೆ ಮಧ್ಯಮ ಉರಿಯಲ್ಲಿ ಕುದಿಸಿ. ದ್ರಾಕ್ಷಿ, ಗೋಡಂಬಿ ಮತ್ತು ಏಲಕ್ಕಿ ಪುಡಿಯನ್ನು ಸೇರಿಸಿ. ಈಗ ಕೃಷ್ಣನಿಗೆ ಇಷ್ಟವಾದ ರುಚಿಕರವಾದ ಅವಲಕ್ಕಿ ಪಾಯಸ ಸವಿಯಲು ಸಿದ್ಧ.

'ವಿಶ್ವಸಂಸ್ಥೆ – ಭಾರತ ನಿಧಿ'ಯ ಕಾರ್ಯಕ್ಷಮತೆಗೆ ವಿವಿಧ ರಾಷ್ಟ್ರಗಳ ಕೃತಜ್ಞತೆ

ವಿಶ್ವಸಂಸ್ಥೆ : ವಿಶ್ವಸಂಸ್ಥೆಯ ಪ್ರಧಾನ ಕಚೇರಿಯಲ್ಲಿ ಆಯೋಜಿಸಲಾಗಿದ್ದ ಭಾರತ–ವಿಶ್ವಸಂಸ್ಥೆ ಅಭಿವೃದ್ಧಿ ಪಾಲುದಾರಿಕೆ ನಿಧಿಯ 9ನೇ ವಾರ್ಷಿಕ ಕಾರ್ಯಕ್ರಮದಲ್ಲಿ, ಜಾಗತಿಕ ದಕ್ಷಿಣದ (ಗ್ಲೋಬಲ್ ಸೌತ್) ರಾಷ್ಟ್ರಗಳ ಅಭಿವೃದ್ಧಿಗಾಗಿ ಭಾರತ ನೀಡುತ್ತಿರುವ ಅನನ್ಯ ಕೊಡುಗೆ ಮತ್ತು ಬದ್ಧತೆಯನ್ನು ಹಲವು ದೇಶಗಳ ಪ್ರತಿನಿಧಿಗಳು ಮುಕ್ತಕಂಠದಿಂದ ಶ್ಲಾಘಿಸಿದ್ದಾರೆ. ಕಾರ್ಯಕ್ರಮ ಉದ್ದೇಶಿಸಿ ಮಾತನಾಡಿದ ವಿಶ್ವಸಂಸ್ಥೆಯಲ್ಲಿನ ಭಾರತದ ಶಾಶ್ವತ ಪ್ರತಿನಿಧಿ ರಾಯಭಾರಿ ಪರ್ವತನೇನಿ ಹರೀಶ್, ಜಾಗತಿಕ ದಕ್ಷಿಣದ ಮಿತ್ರ ರಾಷ್ಟ್ರಗಳೊಂದಿಗೆ ತನ್ನ ಅಭಿವೃದ್ಧಿ ಅನುಭವಗಳನ್ನು ಹಂಚಿಕೊಳ್ಳಲು ಭಾರತ ಸದಾ ಸಿದ್ಧವಾಗಿದೆ ಎಂದು ಪುನರುಚ್ಚರಿಸಿದರು.

ಟಿಬೆಟ್ ಹಾಗೂ ಚೀನಾದ ಕ್ವಿಂಗ್ಹೈನಲ್ಲಿ ಪ್ರಬಲ ಭೂಕಂಪ

ಟಿಬೆಟ್ : ಟಿಬೆಟ್‌ನಲ್ಲಿ 7.0 ತೀವ್ರತೆಯ ಭೀಕರ ಭೂಕಂಪ ಸಂಭವಿಸಿ 16 ಜನರು ಪ್ರಾಣ ಕಳೆದುಕೊಂಡು 76 ಜನರು ಗಾಯಗೊಂಡ ಬೆನ್ನಲ್ಲೇ, ಚೀನಾದ ಕ್ವಿಂಗ್ಹೈ ಪ್ರಾಂತ್ಯದಲ್ಲೂ ಶನಿವಾರ 5.3 ತೀವ್ರತೆಯ ಮತ್ತೊಂದು ಭೂಕಂಪ ಸಂಭವಿಸಿದೆ. ವಾಯುವ್ಯ ಚೀನಾದ ಕ್ವಿಂಗ್ಹೈ ಪ್ರಾಂತ್ಯದ ಝುಡೋಯ್ ಕೌಂಟಿಯಲ್ಲಿ ಸಂಜೆ 4:39ಕ್ಕೆ ಭೂಮಿಯ ಅಂತರಾಳದಲ್ಲಿ 10 ಕಿಲೋಮೀಟರ್ ಆಳದಲ್ಲಿ ಈ ಭೂಕಂಪನದ ಕೇಂದ್ರಬಿಂದು ದಾಖಲಾಗಿದೆ ಎಂದು ಚೀನಾ ಭೂಕಂಪ ಜಾಲ ಕೇಂದ್ರ ತಿಳಿಸಿದೆ. ಈ ಘಟನೆಯಲ್ಲಿ ತಕ್ಷಣಕ್ಕೆ ಯಾವುದೇ ಜೀವಹಾನಿ ಅಥವಾ ಆಸ್ತಿಪಾಸ್ತಿ ನಷ್ಟದ ವರದಿಯಾಗಿಲ್ಲ.

ಇಸ್ರೇಲ್‌ಗೆ ಇರಾನ್ ಸರ್ವನಾಶದ ಬೆದರಿಕೆ

ಅಮೇರಿಕ : ಮಧ್ಯಪ್ರಾಚ್ಯದಲ್ಲಿ ಅಮೆರಿಕ–ಇಸ್ರೇಲ್ ಹಾಗೂ ಇರಾನ್ ನಡುವಿನ ಉದ್ವಿಗ್ನತೆ ಮಿತಿಮೀರಿದ್ದು, ಪರಸ್ಪರ ದಾಳಿ ಮತ್ತು ಪ್ರತ್ಯಾ ರೋಪಗಳ ಸರಣಿ ನಿರಂತರವಾಗಿ ಮುಂದುವರಿದಿದೆ. ಇಸ್ರೇಲ್ ಮೇಲೆ ತೀವ್ರ ವಾಗ್ದಾಳಿ ನಡೆಸಿರುವ ಇರಾನ್ ಸಂಸತ್ತಿನ ರಾಷ್ಟ್ರೀಯ ಭದ್ರತೆ ಮತ್ತು ವಿದೇಶಾಂಗ ನೀತಿ ಸಮಿತಿಯ ಮುಖ್ಯಸ್ಥ ಇಬ್ರಾಹಿಂ ಅಜೀಜಿ, ಸಂಪೂರ್ಣ ಇಸ್ರೇಲನ್ನು ಜನವಸತಿರಹಿತ ಪ್ರದೇಶವನ್ನಾಗಿ ಮಾಡಲು ತನಗೆ ಒಂದು ಗಂಟೆಗಿಂತ ಕಡಿಮೆ ಸಮಯ ಸಾಕು ಎಂದು ಬೆದರಿಕೆ ಒಡ್ಡಿದ್ದಾರೆ. ವಿರುದ್ಧ ಇಸ್ರೇಲ್ ಅಥವಾ ಅಮೆರಿಕ ಕೈಗೊಳ್ಳುವ ಯಾವುದೇ ಸಣ್ಣ ಸವಾಲಿಗೂ ಪ್ರತಿಯಾಗಿ ಆಕ್ರಮಿತ ಪ್ರದೇಶಗಳನ್ನು ಸಂಪೂರ್ಣ ವಾಸಯೋಗ್ಯವಲ್ಲದಂತೆ ಮಾಡಲಾಗುವುದು ಎಂದು ಎಚ್ಚರಿಸಿದ್ದಾರೆ.

ಅಮೆರಿಕದ ಫ್ಲೋರಿಡಾದಲ್ಲಿ ಭೀಕರ ಗುಂಡಿನ ದಾಳಿ

ಅಮೆರಿಕ : ಅಮೆರಿಕದ ಫ್ಲೋರಿಡಾ ರಾಜ್ಯದ ತಲ್ಲಹಸ್ಸಿ ನಗರದಲ್ಲಿ ಶನಿವಾರ ತಡರಾತ್ರಿ ಭೀಕರ ಗುಂಡಿನ ದಾಳಿ ನಡೆದಿದ್ದು, ಕನಿಷ್ಠ 12 ಮಂದಿ ಗಾಯಗೊಂಡಿದ್ದಾರೆ. ಗಾಯಗೊಂಡವರಲ್ಲಿ ಆರು ಮಂದಿ ಅಪ್ರಾಪ್ತ ವಯಸ್ಕರಾಗಿದ್ದಾರೆ ಎಂದು ಸ್ಥಳೀಯ ಪೊಲೀಸರು ಸ್ಪಷ್ಟಪಡಿಸಿದ್ದಾರೆ. ಫ್ಲೋರಿಡಾ ಎ ಅಂಡ್ ಎಂ ವಿಶ್ವವಿದ್ಯಾಲಯದ (FAMU) ಬ್ರಾಗ್ ಮೆಮೋರಿಯಲ್ ಕ್ರೀಡಾಂಗಣದ ಸಮೀಪ ಈ ದುರಂತ ಸಂಭವಿಸಿದೆ. ಘಟನೆಯಲ್ಲಿ ಗಾಯಗೊಂಡ 12 ಮಂದಿಯ ಪೈಕಿ 11 ಜನರಿಗೆ ನೇರವಾಗಿ ಗುಂಡೇಟು ತಗುಲಿದೆ ಎಂದು ಪೊಲೀಸರು ಹಾಗೂ ವಿಶ್ವವಿದ್ಯಾಲಯದ ಅಧಿಕಾರಿಗಳು ತಿಳಿಸಿದ್ದಾರೆ.

ಸೌದಿ ತೈಲಕ್ಷೇತ್ರದ ಮೇಲೆ ಡ್ರೋನ್ ದಾಳಿ

ಸೌದಿ ಅರೇಬಿಯಾ : ಸೌದಿ ಅರೇಬಿಯಾದ ಶೈಬಾ ತೈಲಕ್ಷೇತ್ರದ ಮೇಲೆ ನಡೆದ ಡ್ರೋನ್ ದಾಳಿಯಲ್ಲಿ ಭಾರತೀಯ ಪ್ರಜೆಯೊಬ್ಬರು ಗಾಯಗೊಂಡಿದ್ದಾರೆ. ಯೆಮೆನ್‌ನ ಹೌತಿ ಬಂಡುಕೋರರು ನಡೆಸುತ್ತಿರುವ ದಾಳಿಯ ಹಿನ್ನೆಲೆಯಲ್ಲಿ ಈ ಘಟನೆ ನಡೆದಿದ್ದು, ರಿಯಾದ್‌ನಲ್ಲಿರುವ ಭಾರತೀಯ ರಾಯಭಾರ ಕಚೇರಿಯು ಸೌದಿ ಅಧಿಕಾರಿಗಳೊಂದಿಗೆ ಸಂಪರ್ಕದಲ್ಲಿದೆ. ಗಾಯಗೊಂಡ ಭಾರತೀಯ ಪ್ರಜೆಗೆ ಅಗತ್ಯವಿರುವ ಎಲ್ಲ ನೆರವನ್ನು ನೀಡುವುದಾಗಿ ರಾಯಭಾರ ಕಚೇರಿ ತಿಳಿಸಿದೆ.

ಹ್ಯಾರಿ ಕೇನ್ ಮುಡಿಗೆ ಪ್ರತಿಷ್ಠಿತ ಪ್ರಶಸ್ತಿ

ಇಂಗ್ಲೆಂಡ್ : ಫುಟ್ಬಾಲ್ ಜಗತ್ತಿನ ಅತ್ಯಂತ ಪ್ರತಿಷ್ಠಿತ ಪ್ರಶಸ್ತಿಗಳಲ್ಲಿ ಒಂದಾದ ಬ್ಯಾಲನ್ ಡಿ'ಓರ್ 2026ರ ವಿಜೇತರ ಹೆಸರನ್ನು ಪ್ರಕಟಿಸಲಾಗಿದೆ. ಲಂಡನ್‌ನಲ್ಲಿ ನಡೆದ ಅದ್ದೂರಿ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಇಂಗ್ಲೆಂಡ್ ರಾಷ್ಟ್ರೀಯ ತಂಡದ ನಾಯಕ ಹಾಗೂ ಬೇಯರ್ನ್ ಮ್ಯೂನಿಚ್ ಫಾರ್ವರ್ಡ್ ಹ್ಯಾರಿ ಕೇನ್ ಪುರುಷರ ವಿಭಾಗದ ಬ್ಯಾಲನ್ ಡಿ'ಓರ್ ಪ್ರಶಸ್ತಿಯನ್ನು ತಮ್ಮದಾಗಿಸಿಕೊಂಡಿದ್ದಾರೆ. ಈ ಮಹತ್ವದ ಸ್ಪರ್ಧೆಯಲ್ಲಿ ಅವರು ಫ್ರಾನ್ಸ್‌ನ ಕೆಯ್ಲಿಯನ್ ಎಂಬಪ್ಪೆ ಹಾಗೂ ಸ್ಪೇನ್‌ನ ಯುವ ತಾರೆ ಲ್ಯಾಮಿನ್ ಯಮಲ್ ಅವರನ್ನು ಹಿಂದಿಕ್ಕಿ ಅಗ್ರಸ್ಥಾನ ಪಡೆದರು.

ಅಭಿಷೇಕ್ ಶರ್ಮಾ ಅಬ್ಬರ: ಕೊಹ್ಲಿ, ರೋಹಿತ್ ದಾಖಲೆ ಧೂಳೀಪಟ

ವೆಲ್ಲಿಂಗ್ಟನ್ : ನ್ಯೂಜಿಲೆಂಡ್ ವಿರುದ್ಧದ ಟಿ20 ಸರಣಿಯ ನಿರ್ಣಾಯಕ ಪಂದ್ಯದಲ್ಲಿ ಯುವ ಆಟಗಾರ ಅಭಿಷೇಕ್ ಶರ್ಮಾ ಸ್ಫೋಟಕ ಬ್ಯಾಟಿಂಗ್ ನಡೆಸಿ ಹೊಸ ಇತಿಹಾಸ ಸೃಷ್ಟಿಸಿದ್ದಾರೆ. ವೆಲ್ಲಿಂಗ್ಟನ್‌ನಲ್ಲಿ ನಡೆದ ಪಂದ್ಯದಲ್ಲಿ ಕೇವಲ 38 ಎಸೆತಗಳಲ್ಲಿ 113 ರನ್ ಸಿಡಿಸಿದ ಅಭಿಷೇಕ್, ಮೈದಾನದಲ್ಲಿದ್ದ ಪ್ರೇಕ್ಷಕರನ್ನು ರೋಮಾಂಚನಗೊಳಿಸುವುದರ ಜೊತೆಗೆ ಕ್ರಿಕೆಟ್ ಜಗತ್ತಿನ ಪ್ರಮುಖ ದಾಖಲೆಗಳನ್ನು ತಮ್ಮ ಹೆಸರಿಗೆ ಬರೆದುಕೊಂಡಿದ್ದಾರೆ. ಈ ಮೈಲಿಗಲ್ಲಿನ ಪಂದ್ಯದಲ್ಲಿ ಅಭಿಷೇಕ್ ಶರ್ಮಾ ಮತ್ತು ಭಾರತ ತಂಡ 6 ಐತಿಹಾಸಿಕ ದಾಖಲೆಗಳನ್ನು ಸೃಷ್ಟಿಸಿದೆ.

114 ಪದಕ ಗೆದ್ದು ಇತಿಹಾಸ ಬರೆದ ಭಾರತ

ಹೈದರಾಬಾದ್ : ಜಪಾನ್‌ನ ಐಚಿ–ನಗೋಯಾದಲ್ಲಿ ನಡೆದ 2026ರ ಏಷ್ಯನ್ ಪ್ಯಾರಾ ಗೇಮ್ಸ್‌ನಲ್ಲಿ ಭಾರತೀಯ ಕ್ರೀಡಾಪಟುಗಳು ಐತಿಹಾಸಿಕ ಪ್ರದರ್ಶನ ನೀಡುವ ಮೂಲಕ ಹೊಸ ದಾಖಲೆ ಬರೆದಿದ್ದಾರೆ. ಭಾರತವು ಈ ಕ್ರೀಡಾಕೂಟದಲ್ಲಿ 30 ಚಿನ್ನ, 35 ಬೆಳ್ಳಿ ಮತ್ತು 49 ಕಂಚಿನ ಪದಕಗಳೊಂದಿಗೆ ಒಟ್ಟು 114 ಪದಕಗಳನ್ನು ಗೆದ್ದುಕೊಂಡು ಪದಕ ಪಟ್ಟಿಯಲ್ಲಿ ನಾಲ್ಕನೇ ಸ್ಥಾನದೊಂದಿಗೆ ತನ್ನ ಅಭಿಯಾನವನ್ನು ಪೂರ್ಣಗೊಳಿಸಿದೆ. ಇದರೊಂದಿಗೆ,

2023ರ ಚೀನಾದ ಹ್ಯಾಂಗ್‌ಝೌನಲ್ಲಿ 27 ಚಿನ್ನ ಸೇರಿ 108 ಪದಕ ಗೆದ್ದು ನಿರ್ಮಿಸಿದ್ದ ತನ್ನದೇ ಹಿಂದಿನ ದಾಖಲೆಯನ್ನು ಭಾರತೀಯ ಪಡೆ ಮೆಟ್ಟಿ ನಿಂತಿದೆ.

ಶಿವಮೊಗ್ಗದಲ್ಲಿ ರಾಷ್ಟ್ರ ಸೇವಿಕಾ ಸಮಿತಿಯ ಸ್ಥಾಪನಾ ದಿನದ ಪಥಸಂಚಲನ

ಶಿವಮೊಗ್ಗ : ಶಿವಮೊಗ್ಗದಲ್ಲಿ ರಾಷ್ಟ್ರ ಸೇವಿಕಾ ಸಮಿತಿಯ ಶಿವಮೊಗ್ಗ ವಿಭಾಗದ ವತಿಯಿಂದ ಸಮಿತಿಯ ಸ್ಥಾಪನಾ ದಿನ ಹಾಗೂ ವಿಜಯ ದಶಮಿ ಪಥಸಂಚಲನ ಕಾರ್ಯಕ್ರಮವು ಅತ್ಯಂತ ಶಿಸ್ತುಬದ್ಧವಾಗಿ ಮತ್ತು ಯಶಸ್ವಿಯಾಗಿ ನೆರವೇರಿತು. ಸಭಾ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದ ಫಿಟ್ನೆಸ್ ತರಬೇತುದಾರೆ ಶ್ರೀಮತಿ ಸುನೀತಾ ಚೇತನ್ ಅವರು ಸಮಿತಿಯು ಕೈಗೊಂಡಿರುವ ವ್ಯಕ್ತಿ ನಿರ್ಮಾಣದ ಕಾರ್ಯವನ್ನು ಶ್ಲಾಘಿಸಿದರು. ಮಹಿಳೆಯರಲ್ಲಿ ದೈಹಿಕ ದೃಢತೆ ಹಾಗೂ ಮಾನಸಿಕ ಸ್ಥೈರ್ಯ ಅತ್ಯಂತ ಅವಶ್ಯಕವಾಗಿದ್ದು, ಪ್ರತಿಯೊಬ್ಬರೂ ಇದರ ಕಡೆಗೆ ಹೆಚ್ಚಿನ ಗಮನ ನೀಡಬೇಕು ಎಂದು ಅವರು ಕರೆ ನೀಡಿದರು.

ರಾಜಮನೆತನದ ಆರೋಪಗಳಿಗೆ ಸಚಿವ ಯತೀಂದ್ರ ತೀಕ್ಷ್ಣ ತಿರುಗೇಟು

ಮೈಸೂರು : ಮೈಸೂರು ದಸರಾ ಮಹೋತ್ಸವ ಮುಕ್ತಾಯಗೊಳ್ಳುತ್ತಿದ್ದಂತೆ ರಾಜ್ಯ ಸರ್ಕಾರ ಹಾಗೂ ಮೈಸೂರು ರಾಜಮನೆತನದ ನಡುವಿನ ಭಿನ್ನಾಭಿಪ್ರಾಯ ಬಹಿರಂಗಗೊಂಡಿದೆ. ದಸರಾ ಆಚರಣೆ ವೇಳೆ ಧಾರ್ಮಿಕ ಸಂಪ್ರದಾಯಗಳಿಗೆ ಅಡ್ಡಿಪಡಿಸಲಾಗಿದೆ ಮತ್ತು ಪೊಲೀಸ್ ಅಧಿಕಾರಿಗಳು ಅನುಚಿತವಾಗಿ ವರ್ತಿಸಿದ್ದಾರೆ ಎಂದು ಆರೋಪಿಸಿ ರಾಜಮಾತೆ ಪ್ರಮೋದಾದೇವಿ ಒಡೆಯರ್ ಅವರು ಬರೆದಿದ್ದ ನಾಲ್ಕು ಪುಟಗಳ ಪತ್ರಕ್ಕೆ ಸಚಿವ ಡಾ. ಯತೀಂದ್ರ ಸಿದ್ದರಾಮಯ್ಯ ತೀವ್ರ ಪ್ರತಿಕ್ರಿಯೆ ನೀಡಿದ್ದಾರೆ. ಅರಮನೆಯ ಸಂಪೂರ್ಣ ಜಾಗ ಸರ್ಕಾರದ ಸುಪರ್ದಿಯಲ್ಲೇ ಇದ್ದು, ರಾಜಮನೆತನದವರಿಗೆ ಕೇವಲ ವಾಸಿಸಲು ಮಾತ್ರ ಜಾಗ ನೀಡಲಾಗಿದೆ ಎಂದು ಅವರು ಸ್ಪಷ್ಟಪಡಿಸಿದರು.

ಎಸ್‌ಎಸ್‌ಟಿ ಮೀಸಲಾತಿ ರದ್ದು: ಸುಪ್ರೀಂಕೋರ್ಟ್‌ಗೆ ಎಸ್‌ಎಲ್‌ಪಿ ಸಲ್ಲಿಸಲು ಸರ್ಕಾರ ತೀರ್ಮಾನ

ಬೆಂಗಳೂರು : ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ (ಎಸ್‌ಸಿ/ಎಸ್‌ಟಿ) ಮೀಸಲಾತಿ ಪ್ರಮಾಣ ಹೆಚ್ಚಳವನ್ನು ರದ್ದುಗೊಳಿಸಿರುವ ಹೈಕೋರ್ಟ್ ತೀರ್ಪಿನ ವಿರುದ್ಧ ಸುಪ್ರೀಂ ಕೋರ್ಟ್‌ನಲ್ಲಿ ವಿಶೇಷ ಅನುಮತಿ ಅರ್ಜಿ (ಎಸ್‌ಎಲ್‌ಪಿ) ಸಲ್ಲಿಸಲು ರಾಜ್ಯ ಸರ್ಕಾರ ತೀರ್ಮಾನಿಸಿದೆ. ಪರಿಶಿಷ್ಟ ಸಮುದಾಯಗಳ ಸಂವಿಧಾನಬದ್ಧ ಹಕ್ಕುಗಳ ರಕ್ಷಣೆಗೆ ಸರ್ಕಾರ ಬದ್ಧವಾಗಿದ್ದು, ಈ ವಿಷಯದಲ್ಲಿ ಯಾವುದೇ ಕಾರಣಕ್ಕೂ ರಾಜಿಯಾಗುವುದಿಲ್ಲ ಎಂದು ಉಪ ಮುಖ್ಯಮಂತ್ರಿ ಡಾ. ಜಿ. ಪರಮೇಶ್ವರ್ ಸ್ಪಷ್ಟಪಡಿಸಿದ್ದಾರೆ. ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರ ನೇತೃತ್ವದ ಸಚಿವ ಸಂಪುಟ ಸಭೆಯಲ್ಲಿ ಸುದೀರ್ಘ ಚರ್ಚೆ ನಡೆದಿದ್ದು, ಮೇಲ್ಮನವಿ ಸಲ್ಲಿಸುವ ನಿಶ್ಚಯಕ್ಕೆ ಬರಲಾಗಿದೆ ಎಂದು ತಿಳಿಸಿದರು.

ಸಕ್ಕರೆ ಬೆಲೆ ಏರಿಕೆಯಾಗುವವರೆಗೆ ಕಾಯಲು ರೈತರಿಗೆ ಸಿಎಂ ಮನವಿ

ಬೆಂಗಳೂರು : ಬೆಳಗಾವಿಯ ಸುವರ್ಣ ವಿಧಾನ ಸೌಧದಲ್ಲಿ ನಡೆದ ಸಭೆಯಲ್ಲಿ, ತಕ್ಷಣವೇ ಸಿಹಿ ಸುದ್ದಿ ನೀಡುವಂತೆ ಪಟ್ಟು ಹಿಡಿದ ರೈತರಿಗೆ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ತಮ್ಮ ಸರ್ಕಾರದ ಅಸಹಾಯಕತೆಯನ್ನು ವ್ಯಕ್ತಪಡಿಸಿದ್ದಾರೆ. ರಾಜ್ಯದಲ್ಲಿ ತೀವ್ರ ಬರಗಾಲ ಆವರಿಸಿದ್ದು, ಸರ್ಕಾರದ ಖಜಾನೆ ಖಾಲಿಯಾಗಿದೆ ಮತ್ತು ಹಣಕಾಸಿನ ಪರಿಸ್ಥಿತಿ ಗಂಭೀರವಾಗಿದೆ ಎಂದು ತಿಳಿಸಿದರು. ಸಕ್ಕರೆ ಬೆಲೆ ಹೆಚ್ಚಾಗುವ ವರೆಗೆ ಅಥವಾ ಕೇಂದ್ರ ಸರ್ಕಾರದ ಸಮಿತಿ ನೀಡುವ ವರದಿ ಬರುವವರೆಗೆ ರೈತರು ತಾಳ್ಮೆಯಿಂದಿರಬೇಕು ಎಂದು ಮನವಿ ಮಾಡಿದರು. ವರದಿ ಬಂದ ಬಳಿಕ ಸಕ್ಕರೆಗೆ ಉತ್ತಮ ಬೆಲೆ ನಿಗದಿಯಾದರೆ ಸಮಸ್ಯೆ ಬಗೆಹರಿಯಲಿದೆ ಎಂದರು.

ಉಮ್ರಾ ಯಾತ್ರಿಕರನ್ನು 27ರೊಳಗೆ ಕರೆತರದಿದ್ದರೆ ಸುಪ್ರೀಂ ಮೊರೆ : ಖಾದರ್

ಚಿಕ್ಕಮಗಳೂರು : ಮಧ್ಯಪ್ರಾಚ್ಯದಲ್ಲಿ ಹೆಚ್ಚುತ್ತಿರುವ ಉದ್ವಿಗ್ನತೆ ಹಾಗೂ ಭದ್ರತಾ ಕಾರಣಗಳಿಂದಾಗಿ ವಿಮಾನ ಸೇವೆಗಳು ಸ್ಥಗಿತಗೊಂಡಿದ್ದು, ಸೌದಿ ಅರೇಬಿಯಾದ ಮೆಕ್ಕಾ ಮತ್ತು ಮದೀನಾದಲ್ಲಿ ಕರ್ನಾಟಕದ ಸುಮಾರು 600ಕ್ಕೂ ಹೆಚ್ಚು ಉಮ್ರಾ ಯಾತ್ರಿಕರು ಸಿಲುಕಿಕೊಂಡಿದ್ದಾರೆ. ಅಕ್ಟೋಬರ್ 27ರೊಳಗೆ ಅವರನ್ನು ಸುರಕ್ಷಿತವಾಗಿ ಭಾರತಕ್ಕೆ ವಾಪಸ್ ಕರೆತರದಿದ್ದರೆ ಹಜ್ ಸಮಿತಿಯ ಮೂಲಕ ಸುಪ್ರೀಂ ಕೋರ್ಟ್ ಮೊರೆ ಹೋಗುವುದಾಗಿ ರಾಜ್ಯ ಅಲ್ಪಸಂಖ್ಯಾತರ ಕಲ್ಯಾಣ, ಹಜ್ ಮತ್ತು ವಕ್ಫ್ ಸಚಿವ ಯು.ಟಿ. ಖಾದರ್ ವಿಮಾನಯಾನ ಕಂಪನಿಗಳಿಗೆ ಖಡಕ್ ಎಚ್ಚರಿಕೆ ನೀಡಿದ್ದಾರೆ.

ಸ್ಟಿಂಗ್ ಆಪರೇಷನ್ ಕೃತ್ಯದ ಅಸಲಿ ಸೂತ್ರಧಾರರ ಪತ್ತೆಗೆ 10 ದಿನಗಳ ಗಡುವು

ಬೆಂಗಳೂರು: ರಾಜ್ಯ ರಾಜಕಾರಣದಲ್ಲಿ ತೀವ್ರ ಸಂಚಲನ ಮೂಡಿಸಿರುವ ಅಕ್ರಮ ಸ್ಟಿಂಗ್ ಆಪರೇಷನ್ ಪ್ರಕರಣದ ತನಿಖೆ ಈಗ ಅಂತಿಮ ಹಾಗೂ ನಿರ್ಣಾಯಕ ಹಂತಕ್ಕೆ ಬಂದು ತಲುಪಿದೆ. ಈ ವ್ಯವಸ್ಥಿತ ಷಡ್ಯಂತ್ರದಿಂದಾಗಿ ಸರ್ಕಾರದ ಇಮೇಜ್‌ಗೆ ಧಕ್ಕೆಯಾಗಿರುವುದನ್ನು ಗೃಹ ಸಚಿವ ಪ್ರಿಯಾಂಕ್ ಖರ್ಗೆ ಒಪ್ಪಿಕೊಂಡಿದ್ದು, ಈ ನೀಚ ಕೃತ್ಯದ ಹಿಂದಿರುವ ಅಸಲಿ ವಿಲನ್‌ಗಳನ್ನು ಬಯಲಿಗೆಳೆಯಲು ತನಿಖಾ ತಂಡಕ್ಕೆ ಕೇವಲ 10 ದಿನಗಳ ಗಡುವು ನೀಡಿದ್ದಾರೆ. ಪ್ರಕರಣದ ತನಿಖೆಯು ಅತ್ಯಂತ ಪಾರದರ್ಶಕವಾಗಿ ನಡೆಯುತ್ತಿದ್ದು, ಸರ್ಕಾರದ ಘನತೆಗೆ ಮಸಿ ಬಳಿಯಲು ಯತ್ನಿಸಿದವರು ಶೀಘ್ರವೇ ಕಾನೂನಿನ ಸಂಕೋಲೆಗೆ ಸಿಲುಕುವುದು ಖಚಿತ ಎಂದು ಗಂಭೀರ ಎಚ್ಚರಿಕೆ ನೀಡಿದರು.

ಅಯೋಧ್ಯೆ ಭೂಸ್ವಾಧೀನ ಪ್ರಕರಣ: ತೀರ್ಪು ಕಾಯ್ದಿರಿಸಿದ ಸುಪ್ರೀಂ ಕೋರ್ಟ್

ವದೆಹಲಿ : ಅಯೋಧ್ಯೆಯಲ್ಲಿ ಕೈಗೆತ್ತಿಕೊಳ್ಳಲಾಗಿರುವ ವಸತಿ ಯೋಜನೆಗಾಗಿ ಭೂಮಿ ಸ್ವಾಧೀನಪಡಿಸಿಕೊಂಡಿರುವುದನ್ನು ಪ್ರಶ್ನಿಸಿ ಸಲ್ಲಿಸಲಾದ ಅರ್ಜಿಯ ವಿಚಾರಣೆ ಪೂರ್ಣಗೊಳಿಸಿರುವ ಸುಪ್ರೀಂ ಕೋರ್ಟ್ ತನ್ನ ತೀರ್ಪನ್ನು ಕಾಯ್ದಿರಿಸಿದೆ. ನ್ಯಾಯಮೂರ್ತಿಗಳಾದ ಸೂರ್ಯ ಕಾಂತ್, ಜೋಯ್ಮಾಲ್ಯ ಬಾಗ್ಚಿ ಮತ್ತು ವಿ.ಮೋಹನ ಅವರನ್ನೊಳಗೊಂಡ ಪೀಠವು ಈ ಪ್ರಕರಣದ ವಿಚಾರಣೆ ನಡೆಸಿತು. ವಿಚಾರಣೆ ವೇಳೆ ಮೌಖಿಕವಾಗಿ ಅಭಿಪ್ರಾಯ ಹಂಚಿಕೊಂಡ ಅತ್ಯುನ್ನತ ನ್ಯಾಯಾಲಯ, ಭೂಸ್ವಾಧೀನ ಪ್ರಕ್ರಿಯೆಯಲ್ಲಿ ಸಾಮಾಜಿಕ ಪರಿಣಾಮಗಳ ಮೌಲ್ಯಮಾಪನವನ್ನು ನಿರ್ಲಕ್ಷಿಸಲು ಸಾಧ್ಯವಿಲ್ಲ ಎಂದು ತಿಳಿಸಿತು.

ಪಾಟ್ನಾದಲ್ಲಿ ಖರ್ಗೆ ಭಾಷಣದ ವೇಳೆ ಗದ್ದಲ: ಸಿಡಿದೆದ್ದ ಖರ್ಗೆ



ಪಾಟ್ನಾ:ಕಾಂಗ್ರೆಸ್ ರಾಷ್ಟ್ರೀಯ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ತಮ್ಮ ಭಾಷಣದ ವೇಳೆ ಬಿಜೆಪಿ ಸರ್ಕಾರದ ವಿರುದ್ಧ ತೀವ್ರ ವಾಗ್ದಾಳಿ ನಡೆಸುತ್ತಿದ್ದಾಗ, ಸಭೆಯಲ್ಲಿದ್ದ ವ್ಯಕ್ತಿಯೊಬ್ಬರು ಮಧ್ಯಪ್ರವೇಶಿಸಿ "ಮೋದಿ ಎಲ್ಲಿಗೂ ಹೋಗುವುದಿಲ್ಲ, ಅವರು ಮುಂದೆಯೂ ಅಧಿಕಾರ ನಡೆಸುತ್ತಾರೆ" ಎಂದು ಜೋರಾಗಿ ಕಿರುಚುತ್ತಾ ಖರ್ಗೆಯ ಭಾಷಣಕ್ಕೆ ಅಡ್ಡಿಪಡಿಸಿದರು. ಇದರಿಂದ ತೀವ್ರ ರೊಚ್ಚಿಗೆದ್ದ ಮಲ್ಲಿಕಾರ್ಜುನ ಖರ್ಗೆ ಅವರು, "ಮೋದಿಮಾತ್ರ ಅಲ್ಲ ಅವರಪ್ಪನೂ ಅಧಿಕಾರದಿಂದ ಇಳಿಬೇಕು, ನಡಿ ನೀನು" ಎಂದು ವೇದಿಕೆಯಿಂದಲೇ ಸಾರ್ವಜನಿಕ ವಾಗಿ ಆಕ್ರೋಶ ಹೊರಹಾಕಿದ್ದಾರೆ.

ಸಿಜೆಪಿ ನಾಯಕರ ಜೈಲು ಶಿಕ್ಷೆ ಹಾಗೂ ಪೌರತ್ವ ಗೊಂದಲ..!

ನವದೆಹಲಿ : ಸೌರವ್ ದಾಸ್ ಅವರ ಜಾಮೀನು ಅರ್ಜಿಯನ್ನು ಕೋರ್ಟ್ ನಿರಾಕರಿಸಲು ಕಾರಣವಾದ ಆದೇಶದ ಪ್ರತಿ ವೈರಲ್ ಆಗಿದ್ದು, ತೀವ್ರ ಚರ್ಚೆಗೆ ಗ್ರಾಸವಾಗಿದೆ. ಅರ್ಜಿಯಲ್ಲಿ ಕೆಲವೊಂದು ತಾಂತ್ರಿಕ ಲೋಪಗಳಿರುವುದು ಒಂದೆಡೆಯಾದರೆ, ಎಸ್‌ಇಎಂ ನ್ಯಾಯಾಲಯದ ದಾಖಲೆಗಳಲ್ಲಿ ತಂದೆಯ ಹೆಸರು ಮತ್ತು ಸೂಕ್ತ ವಿಳಾಸವನ್ನು ಸರಿಯಾಗಿ ನೀಡಲು ಅವರು ವಿಫಲರಾಗಿದ್ದಾರೆ. ಕೊನೆಗೆ ಅವರು ದೆಹಲಿಯ ವಿಳಾಸ ನೀಡಿ, ತಂದೆಯ ಹೆಸರು ಸುಬೀರ್ ದಾಸ್ ಎಂದು ನಮೂದಿಸಿದ್ದರು. ಸೌರವ್ ಅವರ ಜೈವಿಕ ತಂದೆ ನೇಪಾಳಿ ಮೂಲದವರಾಗಿದ್ದು, ಅವರಿಗೆ 3 ವರ್ಷವಿದ್ದಾಗ ಕುಟುಂಬವನ್ನು ತೊರೆದಿದ್ದರು. ತದನಂತರ ತಾಯಿ ಸೀಮಾ, ಸುಬೀರ್ ದಾಸ್ ಅವರೊಂದಿಗೆ ನೆಲೆಸಿದ್ದರು.

ದೇಶದ ಮೊದಲ ಬುಲೆಟ್ ರೈಲು ಸಂಚಾರ ಆರಂಭ!

ನವದೆಹಲಿ : ದೇಶದ ಮೊದಲ ಬುಲೆಟ್ ರೈಲು ಯೋಜನೆ ಆಕಾರ ಪಡೆಯುತ್ತಿದ್ದು, 2027ರ ಕೊನೆಯ ತ್ರೈಮಾಸಿಕದಲ್ಲಿ ಅಹಮದಾಬಾದ್ ಹಾಗೂ ಮುಂಬೈ ನಡುವೆ ಅಧಿಕೃತವಾಗಿ ಸೇವೆ ಆರಂಭಿಸುವ ನಿರೀಕ್ಷೆಯಿದೆ ಎಂದು ಕೇಂದ್ರ ರೈಲ್ವೇ ಸಚಿವ ಅಶ್ವಿನಿ ವೈಷ್ಣವ್ ಅವರು ಮಾಹಿತಿ ನೀಡಿದ್ದಾರೆ. ಒಟ್ಟು 508 ಕಿಲೋಮೀಟರ್ ಉದ್ದದ

ಈ ಹೈಸ್ಪೀಡ್ ರೈಲು ಮಾರ್ಗದ ನಿರ್ಮಾಣ ಕಾರ್ಯಗಳು ಅತ್ಯಂತ ವೇಗವಾಗಿ ನಡೆಯುತ್ತಿದ್ದು, ಪೂರ್ಣ ವೇಗದಲ್ಲಿ ಚಲಿಸಿದಾಗ ಬುಲೆಟ್ ರೈಲು ಗಂಟೆಗೆ 320 ಕಿ.ಮೀ ವೇಗದಲ್ಲಿ ಸಂಚರಿಸಲಿದೆ. ಮುಂಬೈನ ಹೃದಯಭಾಗವಾಗಿರುವ ಬಾಂದ್ರಾ–ಕುರ್ಲಾ ಕಾಂಪ್ಲೆಕ್ಸ್‌ನಲ್ಲಿ (BKC) ಏಕೈಕ ಭೂಗತ ನಿಲ್ದಾಣವನ್ನು ನಿರ್ಮಿಸಲಾಗುತ್ತಿದೆ.

ಬಂಗಾಳಕೊಲ್ಲಿಯಲ್ಲಿ ಪ್ರಬಲ ಚಂಡಮಾರುತದ ಭೀತಿ: ಕರಾವಳಿಯಲ್ಲಿ ಹೈಅಲರ್ಟ್

ಒಡಿಶಾ : ಬಂಗಾಳಕೊಲ್ಲಿಯ ಆಗ್ನೇಯ ಮತ್ತು ಪೂರ್ವ–ಮಧ್ಯ ಭಾಗದಲ್ಲಿ ಸೃಷ್ಟಿಯಾಗಿರುವ ವಾಯುಭಾರ ಕುಸಿತವು ತೀವ್ರಗೊಂಡು 'ಆಳವಾದ ವಾಯುಭಾರ ಕುಸಿತ'ವಾಗಿ ಪರಿವರ್ತನೆಯಾಗಿದೆ. ಈ ವ್ಯವಸ್ಥೆಯು ಮತ್ತಷ್ಟು ಬಲಗೊಂಡು ಪ್ರಬಲ ಚಂಡಮಾರುತವಾಗಿ ರೂಪಾಂತರಗೊಳ್ಳಲಿದ್ದು, ಅಕ್ಟೋಬರ್ 28ರಂದು ಭೂಕುಸಿತ ಉಂಟುಮಾಡುವ ಸಾಧ್ಯತೆಯಿದೆ ಎಂದು ಭಾರತೀಯ ಹವಾಮಾನ ಇಲಾಖೆ (IMD) ಎಚ್ಚರಿಕೆ ನೀಡಿದೆ. ಮಾಹಿತಿಯಂತೆ, ಈ ಚಂಡಮಾರುತವು ಪಶ್ಚಿಮ–ವಾಯುವ್ಯ ದಿಕ್ಕಿನತ್ತ ಚಲಿಸಿ ಆಂಧ್ರಪ್ರದೇಶದ ಉತ್ತರ ಕರಾವಳಿ ಹಾಗೂ ಒಡಿಶಾದ ದಕ್ಷಿಣ ಕರಾವಳಿ ಪ್ರದೇಶಗಳ ಮಧ್ಯೆ ತೀವ್ರ ಸ್ವರೂಪದಲ್ಲಿ ಭೂಕುಸಿತ ಉಂಟುಮಾಡಲಿದೆ.

ಕರಾವಳಿ ತರಂಗಿಣಿ

ಕಲಾ ತರಂಗಿಣಿ

ಟೀಸರ್‌ನಲ್ಲೇ ಕುತೂಹಲ ಮೂಡಿಸಿದೆ 'ಎನ್ ಎಚ್–66'

ರಾಷ್ಟ್ರೀಯ ಹೆದ್ದಾರಿ ಮಂಗಳೂರು–ಗೋವಾ ಮಾರ್ಗವಾಗಿ ಮುಂಬೈಗೆ ಸಾಗುವ ಹೆದ್ದಾರಿಯಲ್ಲಿ ನಡೆಯುವ ರೋಚಕ ಥ್ರಿಲ್ಲರ್ ಕಥಾಹಂದರ ಹೊಂದಿರುವ ಚಿತ್ರ"ಎನ್ ಎಚ್–66". ಹೆದ್ದಾರಿ ಪಯಣದ ಈ ಕಥೆಯನ್ನು ಮಂಜುನಾಥ್ ಟಿ.ಆರ್ ನಿರ್ಮಿಸಿ, ನಿರ್ದೇಶಿಸಿದ್ದಾರೆ. ಪ್ರಮೋದ್ ಶೆಟ್ಟಿ, ಶ್ರುತಿ ಹರಿಹರನ್ ಹಾಗೂ ರಾಜೇಶ್ ನಟರಂಗ ಪ್ರಮುಖ ಪಾತ್ರದಲ್ಲಿ ಅಭಿನಯಿಸಿದ್ದಾರೆ. "ಎನ್ ಎಚ್–66" ಚಿತ್ರದ ಶೀರ್ಷಿಕೆಯಡಿ 'ಒಂದು ಹೆದ್ದಾರಿ, ಅನೇಕ ರಹಸ್ಯಗಳು' ಅಡಿ ಬರಹವಿದೆ. ಚಿತ್ರದ ಟೀಸರ್ ಬಿಡುಗಡೆಯಾಗಿದ್ದು ರಾಜೇಶ್ ನಟರಂಗ, ಪ್ರಮೋದ್ ಶೆಟ್ಟಿ ಹಾಗೂ ಶ್ರುತಿ ಹರಿಹರನ್ ಪಾತ್ರದ ಸುತ್ತ ಸಾಗುವ ಕಥೆ ಮತ್ತಷ್ಟು ಕುತೂಹಲ ಹೆಚ್ಚಿಸುವಂತೆ ಮಾಡಿದೆ. ಟೀಸರ್‌ಗೆ ಮೆಚ್ಚುಗೆಯ ಮಹಾಪೂರವೇ ಹರಿದು ಬರುತ್ತಿದೆ. ನಿರ್ಮಾಪಕ, ನಿರ್ದೇಶಕ ಮಂಜುನಾಥ್ ಮಾತನಾಡಿ, ರಾಯರ ಕೃಪೆಯಿಂದ ಆರಂಭವಾದ ಎನ್‌ಎಚ್66 ಚಿತ್ರ ಕಲಾವಿದರ ಸಹಕಾರದಿಂದ ಚೆನ್ನಾಗಿ ಬಂದಿದೆ. ಮೂರು ಕಲಾವಿದರು ಪ್ರತಿ ಯೊಂದು ಹಂತದಲ್ಲಿ ಗೈಡ್ ಆಗಿ, ಗುರುವಾಗಿ ಕೆಲಸ ಮಾಡಿದ್ದಾರೆ. ಚಿತ್ರೀಕರಣ ಹೀಗೇ ಮಾಡಬೇಕು ಎಂದು ಮುಂಚೆಯೇ ನಿರ್ಧಾರ ಮಾಡಿದ್ದೆವು. ಅದೇ ರೀತಿ ಮಾಡಿದ್ದೇವೆ. "ಎನ್‌ಎಚ್66" ಚಿತ್ರ ಪ್ರಯಾಣದ ಕಥೆ ಹೊಂದಿದೆ. ಪ್ರಮೋದ್ ಶೆಟ್ಟಿ ಕಥೆ ಒಪ್ಪಿಕೊಂಡರು. ಬಳಿಕ ಗಿರಿನಗರದ ಪಾರ್ಕ್‌ನಲ್ಲಿ ವಾಕ್ ಮಾಡುವಾಗ ಕಥೆ ಕೇಳಿ ರಾಜೇಶ್ ನಟರಂಗ ಸಹ ಒಪ್ಪಿಗೆ ನೀಡಿದರು. ನಾಯಕಿಗಾಗಿ ಶೋಧ ನಡೆದಿದ್ದಾಗ, ಶ್ರುತಿ ಹರಿಹರನ್ ಅವರೊಂದಿಗೆ ಗೂಗಲ್ ಮೀಟ್ ಮೂಲಕ ಮಾತನಾಡಿ ಅವರನ್ನು ಚಿತ್ರಕ್ಕೆ ಆಯ್ಕೆ ಮಾಡಿಕೊಳ್ಳಲಾಯಿತು. ಸಿನಿಮಾದ ಇಡೀ ಚಿತ್ರೀಕರಣ ಪ್ರವಾಸದಲ್ಲಿ ಮುಗಿದಿದೆ. ಇದಕ್ಕಾಗಿ 650ಕಿಲೋ ಮೀಟರ್ ಸಂಚರಿ ಸಿದ್ದೇವೆ. ನಾನು ಹೊಸಬ ಅಂತ ರಾಜೇಶ್ ನಟರಂಗ ಅಥವಾ ಪ್ರ ಮೋದ್ ಶೆಟ್ಟಿ ಅವರು ಎಂದೂ ನೋಡಲಿಲ್ಲ ಎಂದರು.

ಅನಾವರಣವಾಯಿತು 'ಫಾದರ್' ಚಿತ್ರದ 'ಗಗನದ ನೇಸರ' ಹಾಡು

ಆರ್‌ಸಿ ಸ್ಟುಡಿಯೋಸ್ ಎಂಬ ಬೃಹತ್ ನಿರ್ಮಾಣ ಸಂಸ್ಥೆಯನ್ನು ಆರ್ ಚಂದ್ರು ಆರಂಭಿಸಿದ್ದಾರೆ. ಈ ಸಂಸ್ಥೆಯ ಮೊದಲ ಚಿತ್ರವಾಗಿ "ಫಾದರ್" ನಿರ್ಮಾಣವಾಗಿದೆ. ಆನಂದ್ ಪಂಡಿತ್ ಅರ್ಪಿಸುವ ಈ ಚಿತ್ರವನ್ನು ಯಮುನಾ ಚಂದ್ರು ನಿರ್ಮಾಣ ಮಾಡಿದ್ದಾರೆ. ರಾಜಮೋಹನ್ ನಿರ್ದೇಶಿಸಿರುವ ಈ ಚಿತ್ರದ ಪ್ರಮುಖಪಾತ್ರಗಳಲ್ಲಿ ಪ್ರಕಾಶ್ ರಾಜ್ ಹಾಗೂ ಡಾರ್ಲಿಂಗ್ ಕೃಷ್ಣ ಅಭಿನಯಿಸಿದ್ದಾರೆ. ನಾಯಕಿಯಾಗಿ ಅಮೃತ ಅಯ್ಯಂಗಾರ್ ನಟಿಸಿದ್ದಾರೆ. ನಾಗಭೂಷಣ ಮುಂತಾದವರು ತಾರಾಬಳಗದಲ್ಲಿದ್ದಾರೆ. ಇತ್ತೀಚೆಗೆ ಈ ಚಿತ್ರದ "ಗಗನದ ನೇಸರ" ಎಂಬ ಅಪ್ಪ – ಮಗನ ಬಾಂಧವ್ಯ ಸಾರುವ ಸುಮಧುರ ಹಾಡಿನ ಬಿಡುಗಡೆ ಸಮಾರಂಭ ಅದ್ದೂರಿಯಾಗಿ ನೆರವೇರಿತು. ಮಂಜುನಾಥ್ ಮಾಗೋಡಿ ಅವರು ಬರೆದಿರುವ, ವಿಜಯ್ ಪ್ರಕಾಶ್ ಹಾಡಿರುವ ಹಾಗೂ ನಕುಲ್ ಅಭಯಂಕರ್ ಸಂಗೀತ ನೀಡಿರುವ ಈ ಹಾಡನ್ನು ಮಾಜಿ ಸಚಿವರಾದ ಎಚ್.ಎಂ. ರೇವಣ್ಣ ಹಾಗೂ ನಿರ್ಮಾಪಕ ಕೆ.ಪಿ.ಶ್ರೀಕಾಂತ್ ಬಿಡುಗಡೆ ಮಾಡಿದರು. ನಿರ್ಮಾಪಕ ಉದಯ್ ಕೆ ಮೆಹ್ತಾ, ಮಾಧವ್ ಕಿರಣ್, ವ್ಯಯ ಅನೂಪ್ ರೇವಣ್ಣ ಮುಂತಾದವರು ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು. ಸರಿಗಮ ಯೂಟ್ಯೂಬ್ ಚಾನಲ್‌ನಲ್ಲಿ ಬಿಡುಗಡೆಯಾಗಿರುವ ಈ ಹಾಡಿನ ಬಗ್ಗೆ ಗಣ್ಯರು ಮೆಚ್ಚುಗೆಯ ಮಾತುಗಳಾಡಿದರು. ನಂತರ ಚಿತ್ರತಂಡದ ಸದಸ್ಯರು ಹಾಡು ಹಾಗೂ ಚಿತ್ರದ ಕುರಿತು ಮಾತನಾಡಿದರು. ಡಿಸೆಂಬರ್ 4 ರಂದು ಈ ಚಿತ್ರ ರಾಜ್ಯಾದ್ಯಂತ ಬಿಡುಗಡೆಯಾಗುತ್ತಿದೆ. ನಮ್ಮ ಚಿತ್ರದ "ಫಾದರ್" ನಿರ್ದೇಶಕ ರಾಜಮೋಹನ್. ಒಂದು ಮನಮುಟ್ಟುವ ಕಥೆಯನ್ನು ಅವರು ಮಾಡಿದ್ದಾರೆ. ಇತ್ತೀಚೆಗೆ ಈ ಚಿತ್ರವನ್ನು ಎ.ಆರ್ ರೆಹಮಾನ್ ಸ್ಟುಡಿಯೋದಲ್ಲಿ ನನಗೆ ಸಂಗೀತ ನಿರ್ದೇಶಕ ನಕುಲ್ ಅಭಯಂಕರ್ ತೋರಿಸಿದರು. ಚಿತ್ರ ನೋಡಿದ ಮೇಲೆ ಕಣ್ತುಂಬಿ ನೀರು ಬಂತು. ತಕ್ಷಣ ನಮ್ಮ ಅಪ್ಪನಿಗೆ ಫೋನ್ ಮಾಡಿದೆ. ನಿರ್ದೇಶಕರು ಕಥೆಯನ್ನು ಬಹಳ ಚೆನ್ನಾಗಿ ಹೇಳಿದ್ದರು. ಅದಕ್ಕಿಂತ ಚೆನ್ನಾಗಿ ಚಿತ್ರ ಮಾಡಿದ್ದಾರೆ. ಅಪ್ಪ–ಮಗನ ಪಾತ್ರದಲ್ಲಿ ಪ್ರಕಾಶ್ ರಾಜ್ ಹಾಗೂ ಡಾರ್ಲಿಂಗ್ ಕೃಷ್ಣ ಅವರ ಅಭಿನಯ ಸೂಪರ್. ಇಂದು ಬಿಡುಗಡೆಯಾಗಿರುವ ಹಾಡು ಕೂಡ ಎಲ್ಲರ ಮನಸ್ಸಿಗೂ ಹತ್ತಿರವಾಗುತ್ತದೆ ಎಂದರು.

'ಸುಬ್ಬ ನಿಮ್ಮಲೊಬ್ಬ' ಚಿತ್ರದ ಮೂಲಕ ಆಕ್ಷನ್ ಹೀರೋ ಆಗಲು ಸಜ್ಜು!

ಗಾಯಕನಿಂದ ನಾಯಕನಾಗಿ ಗುರುತಿಸಿಕೊಂಡಿರುವ ನವೀನ್ ಸಜ್ಜು ಇದೀಗ ಮತ್ತೊಂದು ವಿಭಿನ್ನ ಕಥೆಯೊಂದಿಗೆ ಪ್ರೇಕ್ಷಕರ ಮುಂದೆ ಬರಲು ಸಜ್ಜಾಗಿದ್ದಾರೆ. ಸಾಮಾನ್ಯ ಮಧ್ಯಮ ವರ್ಗದ ಕನ್ನಡಿಗನ ಬದುಕು, ಕನಸು, ಸಂಘರ್ಷ ಹಾಗೂ ಹೋರಾಟದ ಕಥಾಹಂದರ ಹೊಂದಿರುವ 'ಸುಬ್ಬ ನಿಮ್ಮಲೊಬ್ಬ' ಚಿತ್ರದ ಮುಹೂರ್ತ ನೆರವೇರಿದ್ದು, ಚಿತ್ರೀಕರಣಕ್ಕೂ ಚಾಲನೆ ದೊರೆತಿದೆ. ಯುನಿಕ್ ಪ್ರೊಡಕ್ಷನ್ಸ್ ಎಲ್‌ಎಲ್‌ಪಿ ಬ್ಯಾನರ್ ಅಡಿಯಲ್ಲಿ ಎಸ್.ಟಿ.ಉದಯ್ ಕುಮಾರ್ ಹಾಗೂ ಅರುಣ್ ಕುಮಾರ್ ಸಿ. ನಿರ್ಮಿಸುತ್ತಿರುವ 'ಸುಬ್ಬ ನಿಮ್ಮಲೊಬ್ಬ' ಚಿತ್ರಕ್ಕೆ ವಿನಯ್ ಕೃಷ್ಣ ಕಥೆ, ಚಿತ್ರಕಥೆ ಬರೆದು ನಿರ್ದೇಶನ ಮಾಡುತ್ತಿದ್ದಾರೆ. ನವೀನ್ ಸಜ್ಜು ನಾಯಕನಾಗಿ ಅಭಿನಯಿಸುತ್ತಿದ್ದು, ಚಿಕ್ಕಮಗಳೂರು ಮೂಲದ ನಟಿ ಶ್ರುತಿ ಗೌಡ ನಾಯಕಿಯಾಗಿ ತೆರೆ ಹಂಚಿಕೊಳ್ಳುತ್ತಿದ್ದಾರೆ. ವಿನಯ್ ಗುರೂಜಿ ಆಶೀರ್ವಾದದೊಂದಿಗೆ 'ಸುಬ್ಬ ನಿಮ್ಮಲೊಬ್ಬ' ಚಿತ್ರಕ್ಕೆ ಚಾಲನೆ ಪೂಜ್ಯ ಶ್ರೀ ವಿನಯ್ ಗುರೂಜಿ ಅವರ ಅಮೃತಹಸ್ತದಿಂದ ಚಿತ್ರದ ಮುಹೂರ್ತ ಸಮಾರಂಭನೆ ರವೇರಿದೆ. ಗುರೂಜಿಯವರ ಆಶೀರ್ವಾದ ಹಾಗೂ ಶುಭ ಹಾರೈಕೆಗಳೊಂದಿಗೆ ಚಿತ್ರತಂಡ ತನ್ನ ಹೊಸ ಸಿನಿ ಪಯಣ ಆರಂಭಿಸಿದೆ. ಮುಹೂರ್ತದ ಮರುದಿನದಿಂದಲೇ ಚಿತ್ರೀಕರಣ ಪ್ರಾರಂಭವಾಗಿದ್ದು, ಮೊದಲ ಹಂತದ ಚಿತ್ರೀಕರಣಕ್ಕೆ ಚಿತ್ರತಂಡ ಚಾಲನೆ ನೀಡಿದೆ. ಸಾಮಾನ್ಯ ಲಾರಿ ಚಾಲಕನ ಅಸಾಮಾನ್ಯ ಹೋರಾಟದ ಕಥೆ.

"ನೀ ನಂಗೆ ಅಲ್ಲವಾ" ನವೆಂಬರ್ 13 ರಂದು ತೆರೆಗೆ

ಸುರಮ್ ಮೂವೀಸ್ ಲಾಂಛನದಲ್ಲಿ ಜಯರಾಮ ದೇವಸಮುದ್ರ ನಿರ್ಮಿಸಿರುವ ಮನೋಜ್ ಪಿ. ನಡಲುಮನೆ ನಿರ್ದೇಶನದ ಹಾಗೂ ರಾಹುಲ್ ಅರ್ಕಟ್, ಕಾಶಿ ಮಾ ನಾಯಕ–ನಾಯಕಿಯಾಗಿ ನಟಿಸಿರುವ "ನೀ ನಂಗೆ ಅಲ್ಲವಾ" ಚಿತ್ರದ ಶೀರ್ಷಿಕೆಗೀತೆಯ ಅನಾವರಣ ಸಮಾರಂಭ ಇತ್ತೀಚೆಗೆ ನೆರವೇರಿತು. ನಿರ್ದೇಶಕ ಮನೋಜ್ ಪಿ ನಡಲುಮನೆ ಅವರೆ ಬರೆದಿರುವ ಈ ಹಾಡನ್ನು ಖ್ಯಾತ ಗಾಯಕ ಜಸ್ಕರಣ್ ಸಿಂಗ್ ಹಾಡಿದ್ದಾರೆ. ಸೂರಜ್ ಜೋಯಿಸ್ ಸಂಗೀತ ಸಂಯೋಜನೆ ಮಾಡಿದ್ದಾರೆ. ರಾಮ್ ಕಿರಣ್ ಮಾಸ್ಟರ್ ನೃತ್ಯ ಸಂಯೋಜನೆ ಮಾಡಿದ್ದು, ರಾಹುಲ್ ಅರ್ಕಟ್–ಕಾಶಿ ಮಾ ಹೆಜ್ಜೆ ಹಾಕಿದ್ದಾರೆ. ಸರಿಗಮ ಯೂಟ್ಯೂಬ್ ಚಾನಲ್ ಮೂಲಕ ಬಿಡುಗಡೆಯಾಗಿರುವ ಈ ಹಾಡಿಗೆ ಮೆಚ್ಚುಗೆಯ ಮಹಾಪೂರವೇ ಹರಿದು ಬರುತ್ತಿದೆ ಹಾಗೂ ಅಧಿಕ ಸಂಖ್ಯೆಯಲ್ಲಿ ವೀಕ್ಷಣೆಯೂ ಅಗುತ್ತಿದೆ. ಹಾಡು ಬಿಡುಗಡೆ ನಂತರ ಚಿತ್ರತಂಡದ ಸದಸ್ಯರು ಮಾತನಾಡಿದರು. "ನೀ ನಂಗೆ ಅಲ್ಲವಾ" ಚಿತ್ರದ ಎಲ್ಲಾ ಹಾಡುಗಳು ಚೆನ್ನಾಗಿದೆ. ಇಂದು ಬಿಡುಗಡೆಯಾಗಿರುವ ಈ ಶೀರ್ಷಿಕೆ ಗೀತೆ ನಮ್ಮ ಇಡೀ ತಂಡದ ಅಚ್ಚುಮೆಚ್ಚು. ನಿರ್ದೇಶಕರ ಸಾಹಿತ್ಯ, ಸೂರಜ್ ಜೋಯಿಸ್ ಅವರ ಸಂಗೀತ ಹಾಗೂ ಜಸ್ಕರಣ್ ಸಿಂಗ್ ಅವರ ಗಾಯನ ತುಂಬಾ ಚೆನ್ನಾಗಿದೆ. ಈ ಹಾಡಿಗೂ ಮುಂಚೆ ಒಂದು ಗ್ಲಿಂಪ್ಸ್ ಬಿಡುಗಡೆ ಮಾಡಿದ್ದು, ಕೆಲವು ನಿಮಿಷಗಳ ಗ್ಲಿಂಪ್ಸ್‌ನಲ್ಲೇ ನಿರ್ದೇಶಕರು ಚಿತ್ರದ ಕಥೆ ಹೇಳಿದ್ದಾರೆ. ನಮ್ಮ ಚಿತ್ರವನ್ನು ನವೆಂಬರ್ 13ರಂದು ಬಿಡುಗಡೆ ಮಾಡುತ್ತಿದ್ದೇವೆ ಎಂದರು.

80ರ ವೃದ್ಧ 70ರ ವೃದ್ಧೆಯ ಪ್ರೇಮಕಥೆ 'ಪೈರ್'ತೆರೆಗೆ

18 ಅಂತರರಾಷ್ಟ್ರೀಯ ಚಲನಚತ್ರ ಪ್ರಶಸ್ತಿಗಳು ಹಾಗೂ 15 ಅತ್ಯುತ್ತಮ ಚಲನಚಿತ್ರ ಪ್ರಶಸ್ತಿಗಳನ್ನು ತನ್ನ ಮುಡಿಗೇರಿಸಿಕೊಂಡು, ಅಪಾರ ಮೆಚ್ಚುಗೆ ಗಳಿಸಿದ ಹಿಂದಿ ಹಾಗೂ ಮಲಯಾಳಂನಲ್ಲಿ ನಿರ್ಮಾಣವಾಗಿರುವ ಚಲನಚಿತ್ರ 'ಪೈರ್'. ಅ.30ರ ಶುಕ್ರವಾರ ಈ ಚಿತ್ರವು ಬೆಂಗಳೂರು ಸೇರಿದಂತೆ ದೇಶಾದ್ಯಂತ ಬಿಡುಗಡೆಯಾಗಲಿದೆ. ಪ್ರಶಸ್ತಿವಿಜೇತ ನಿರ್ದೇಶಕ ವಿನೋದ್ ಕಾಪ್ರಿ ಅವರು ಕಥೆ ಬರೆದು ಆಕ್ಷನ್‌ಕಟ್ ಹೇಳಿರುವ ಈ ಚಿತ್ರವು ಪ್ರೀತಿ, ಒಡನಾಟ, ವೃದ್ಧಾಪ್ಯ, ಒಂಟಿತನ ಹಾಗೂ ಮಾನವೀಯ ಸಂಬಂಧಗಳ ಕುರಿತಂತೆ ಹೃದಯ ಸ್ಪರ್ಶಿ ಕಥಾನಕವನ್ನು ಹೇಳಲಿದೆ. ಉತ್ತರಾಖಂಡದ ಹಿಮಾಲಯ ಪರ್ವತಗಳ ತಪ್ಪಲಲ್ಲಿರುವ ಪುಟ್ಟ ಹಳ್ಳಿಯೊಂದರ ವೃದ್ಧ ದಂಪತಿಯ ಬದುಕಿನ ಸುತ್ತ ಈ ಚಿತ್ರದ ಕಥೆ ಸಾಗುತ್ತದೆ. ಮಕ್ಕಳಿಗಾಗಿ ಕಾಯುತ್ತಾ, ತಮ್ಮ ಕೊನೆಯ ದಿನಗಳಲ್ಲಿ ಪರಸ್ಪರ ಆಸರೆಯಾಗಿ ಬದುಕುವ ಇಬ್ಬರು ಹಿರಿಯ ಜೀವಿಗಳ ಪ್ರೀತಿ, ನೆನಪುಗಳು ಮತ್ತು ಭಾವನೆಗಳನ್ನು ಪೈರ್ ಚಿತ್ರ ಅತ್ಯಂತ ಸಹಜವಾಗಿ ತೆರೆದಿಡುತ್ತದೆ. ಈ ಚಿತ್ರದ ವಿಶೇಷತೆಯೆಂದರೆ, ಪ್ರಮುಖ ಪಾತ್ರಗಳಲ್ಲಿ ನಟಿಸಿರುವ 80 ವರ್ಷದ ಪದಮ್ ಸಿಂಗ್ ಮತ್ತು 70 ವರ್ಷದ ಹೀರಾದೇವಿ ವೃತ್ತಿಪರ ಕಲಾವಿದರಲ್ಲ.

ನಟ ನಮನ್ ಅರೋರಾ ಸ್ಯಾಂಡಲ್‌ವುಡ್‌ಗೆ ಎಂಟ್ರಿ

ದೇಶಾದ್ಯಂತ ಡಿಜಿಟಲ್ ಮನರಂಜನಾ ಲೋಕದಲ್ಲಿ ಹಾಗೂ ಬಾಲಿವುಡ್ ಚಿತ್ರರಂಗದಲ್ಲಿ ತಮ್ಮ ಸಹಜ ಹಾಸ್ಯ ಮತ್ತು ನಟನೆಯ ಮೂಲಕ ಗಮನ ಸೆಳೆದಿರುವ ಖ್ಯಾತ ನಟ ಹಾಗೂ ಸ್ಟ್ಯಾಂಡಪ್ ಕಾಮಿಡಿಯನ್ ನಮನ್ ಅರೋರಾ ಇದೀಗ ಕನ್ನಡ ಚಿತ್ರರಂಗಕ್ಕೆ ಪ್ರವೇಶಿಸಲು ಸಜ್ಜಾಗಿದ್ದಾರೆ. ವಿಶಿಷ್ಟ ಕಥಾಹಂದರ ಹೊಂದಿರುವ 'ಹುಬ್ಬಳ್ಳಿ ಹಂಟರ್ಸ್' ಚಿತ್ರದ ಮೂಲಕ ಅವರು ಚಂದನವನಕ್ಕೆ ಅಧಿಕೃತವಾಗಿ ಪಾದಾರ್ಪಣೆ ಮಾಡುತ್ತಿದ್ದು, ಸ್ಯಾಂಡಲ್‌ವುಡ್ ಪ್ರೇಕ್ಷಕರನ್ನು ರಂಜಿಸಲು ಹೊಸ ಅವತಾರದಲ್ಲಿ ಕಣಕ್ಕಿಳಿಯುತ್ತಿದ್ದಾರೆ. ಸ್ಟ್ಯಾಂಡಪ್ ಕಾಮಿಡಿ ಮತ್ತು ಡಿಜಿಟಲ್ ವೇದಿಕೆಗಳಲ್ಲಿ ಸಕ್ರಿಯರಾಗಿದ್ದ ನಮನ್ ಅರೋರಾ ಅವರಿಗೆ ಇತ್ತೀಚೆಗೆ ದೊಡ್ಡ ಮಟ್ಟದ ಬ್ರೇಕ್ ತಂದು ಕೊಟ್ಟಿದ್ದು ಸಮಯ್ ರೈನಾ ನಿರೂಪಣೆಯ ಜನಪ್ರಿಯ 'ಇಂಡಿಯಾಸ್ ಗಾಟ್ ಲೇಟೆಂಟ್' ಶೋ. ಈ ವೇದಿಕೆಯಲ್ಲಿ ಅವರ ಅದ್ಭುತ ಕಾಮಿಕ್ ಟೈಮಿಂಗ್, ಪ್ರಬುದ್ಧ ಅಭಿನಯ ಹಾಗೂ ಪ್ರೇಕ್ಷಕರನ್ನು ನಗೆಗಡಲಲ್ಲಿ ತೇಲಿಸಿದ ಶೈಲಿ ಸಾಮಾಜಿಕ ಜಾಲತಾಣಗಳಲ್ಲಿ ಭಾರಿ ವೈರಲ್ ಆಗಿತ್ತು.

'ನಾವು ತುಂಬಾ ಒಳ್ಳೆಯವರು' ಟ್ರೇಲರ್ ಬಿಡುಗಡೆ

ಕಳೆದ ವರ್ಷ ಪ್ರೇಕ್ಷಕರ ಮನಗೆದ್ದು ಗಮನಾರ್ಹ ಯಶಸ್ಸು ಕಂಡಿದ್ದ 'ಪಪ್ಪಿ' ಸಿನಿಮಾದ ಯಶಸ್ವಿ ತಂಡದಿಂದ ಇದೀಗ ಮತ್ತೊಂದು ಹೊಸ ಚಿತ್ರ ತೆರೆಗೆ ಬರಲು ಸಜ್ಜಾಗಿದೆ. ನಿರ್ದೇಶಕ ಆಯುಷ್ ಮಲ್ಲಿ ಸಾರಥ್ಯದ ಈ ಚಿತ್ರತಂಡ ಮತ್ತೊಮ್ಮೆ ಉತ್ತರ ಕರ್ನಾಟಕದ ಅಪ್ಪಟ ಜವಾರಿ ಸೊಗಡಿನ ಕಥೆಯನ್ನು ಹೊತ್ತು ತರುತ್ತಿದ್ದು, ಚಿತ್ರಕ್ಕೆ 'ನಾವು ತುಂಬಾ ಒಳ್ಳೆಯವರು' ಎಂದು ಹೆಸರಿಡಲಾಗಿದೆ. ಬಹುತೇಕ 'ಪಪ್ಪಿ' ಸಿನಿಮಾದ ಕಲಾವಿದರೇ ಈ ಚಿತ್ರದಲ್ಲೂ ಮುಂದುವರಿದಿರುವುದು ವಿಶೇಷ. ಶೀರ್ಷಿಕೆಯೇ ಸೂಚಿಸುವಂತೆ 'ನಾವು ತುಂಬಾ ಒಳ್ಳೆಯವರು' ಸಂಪೂರ್ಣ ಹಾಸ್ಯ ಪ್ರಧಾನ ಕೌಟುಂಬಿಕ ಕಥಾಹಂದರವನ್ನು ಒಳಗೊಂಡಿದೆ. ಹಿಂದಿನ 'ಪಪ್ಪಿ' ಚಿತ್ರಕ್ಕಿಂತ ತೀರಾ ಭಿನ್ನವಾಗಿರುವ ಈ ಕಥೆ ಕುಟುಂಬ ಸಮೇತ ನೋಡುವ ಪ್ರೇಕ್ಷಕರಿಗೆ ಹೇಳಿಮಾಡಿಸಿದಂತಿದೆ. ಉತ್ತರ ಕರ್ನಾಟಕದ ಜನಜೀವನ, ಸಂಸ್ಕೃತಿ ಮತ್ತು ಆಡು ಭಾಷೆಯನ್ನು ತೆರೆಯ ಮೇಲೆ ತರುವುದು ನಿರ್ದೇಶಕ ಆಯುಷ್ ಮಲ್ಲಿ ಅವರ ಆಶಯವಾಗಿದ್ದು, ಈ ಚಿತ್ರದಲ್ಲೂ ಅದು ಮುಂದುವರಿದಿದೆ.

ಸಿನಿಮಾ ಲೋಕದ ಅಧಿಪತಿಯ ಮುಂದಿನ ಚಿತ್ರ ಒಂದಕ್ಕಿಂತ ಒಂದು ಭಿನ್ನ – ವಿಭಿನ್ನ

"ಯಾವಾಗ ತೆರೆಯ ಮೇಲೆ ಆ ಪ್ರಚಂಡ ವ್ಯಕ್ತಿತ್ವ ಪ್ರವೇಶಿಸುತ್ತದೆಯೋ, ಅಲ್ಲಿ ಕೇವಲ ಸಿನಿಮಾವಷ್ಟೇ ಅಲ್ಲ, ಇಡೀ ಒಂದು ಹೊಸ ಜಗತ್ತೇ ಸೃಷ್ಟಿಯಾಗುತ್ತದೆ..." ಹೌದು, ಭಾರತೀಯ ಚಿತ್ರರಂಗದ ಬಾಕ್ಸಾಫೀಸ್ ಸಾಮ್ರಾಜ್ಯದ ಅಧಿಪತಿ, ಪ್ಯಾನ್–ಇಂಡಿಯಾ ಸ್ಟಾರ್‌ಡಮ್‌ನ ಹಿರಿಮೆಯನ್ನು ಜಗತ್ತಿಗೆ ಸಾರಿದ 'ರೆಬೆಲ್ ಸ್ಟಾರ್' ಪ್ರಭಾಸ್ ಇಂದು (ಅ.23) ತಮ್ಮ ಹುಟ್ಟುಹಬ್ಬದ ಸಂಭ್ರಮದಲ್ಲಿದ್ದಾರೆ. ಭವಿಷ್ಯದ ಸೈನ್ಸ್ ಫಿಕ್ಷನ್‌ನಿಂದ ಹಿಡಿದು, ರಕ್ತಸಿಕ್ತ ಆಕ್ಷನ್ ಡ್ರಾಮಾ ಹಾಗೂ ಇತಿಹಾಸದ ಪುಟಗಳಲ್ಲಿ ಅಡಗಿರುವ ವೀರಯೋಧರ ಕಥೆಗಳವರೆಗೆ ಇಂದು ಭಾರತೀಯ ಸಿನಿಮಾದ ಅತ್ಯಂತ ಮಹತ್ವಾಕಾಂಕ್ಷೆಯ ಪ್ರಾಜೆಕ್ಟ್‌ಗಳ ಪ್ರಮುಖ ಮುಖವಾಗಿ ಪ್ರಭಾಸ್ ನಿಂತಿದ್ದಾರೆ. ನಿರ್ದೇಶಕರು ದೊಡ್ಡ ಬಜೆಟ್‌ನ, ಕಲ್ಪನೆಗೂ ಮೀರಿದ ಬೃಹತ್ ಸಿನಿಮಾಗಳನ್ನು ನಿರ್ಮಿಸಲು ಧೈರ್ಯ ಮಾಡುತ್ತಾರೆ ಎಂದಾದರೆ, ಅದರ ಹಿಂದಿರುವ ಏಕೈಕ ಭರವಸೆ 'ಪ್ರಭಾಸ್ ಫ್ಯಾಕ್ಟರ್'!.

25 ದಿನಗಳನ್ನು ಪೂರೈಸಿದ "ಬಿಂಗೊ"

"ಶಂಭೋ ಶಿವ ಶಂಕರ" ಚಿತ್ರ ನಿರ್ದೇಶಿಸಿದ್ದ ಶಂಕರ್ ಕೋನಮಾನಹಳ್ಳಿ ನಿರ್ದೇಶನದಲ್ಲಿ, ಆರ್.ಕೆ. ಚಂದನ್ ಹಾಗೂ ರಾಗಿಣಿ ದ್ವಿವೇದಿ ಪ್ರಮುಖಪಾತ್ರದಲ್ಲಿ ನಟಿಸಿರುವ "ಬಿಂಗೊ" ಚಿತ್ರ 25 ದಿನಗಳ ಪ್ರದರ್ಶನ ಕಂಡಿದೆ. ಈಗಾಗಲೇ ಧಾರಾವಾಹಿಗಳ ಮೂಲಕ ಜನಪ್ರಿಯರಾಗಿದ್ದ ನಾಯಕ ಆರ್.ಕೆ. ಚಂದನ್ ಅವರ ಅಭಿನಯದ ಬಗ್ಗೆ ಅಪಾರ ಮೆಚ್ಚುಗೆ ವ್ಯಕ್ತವಾಗಿದೆ. ರಾಗಿಣಿ ದ್ವಿವೇದಿ ಅವರ ಅಭಿನಯಕ್ಕೂ ಅಭಿಮಾನಿಗಳು ಫಿದಾ ಆಗಿದ್ದಾರೆ. ಶಂಕರ್ ಕೋನಮಾನಹಳ್ಳಿ ನಿರ್ದೇಶನಕ್ಕೆ ಹಾಗೂ ಚಿತ್ರದ ಕಥೆಗೆ ಜನರು ಮನಸೋತಿದ್ದಾರೆ. "ಪ್ರೇಮದ ಊರಲಿ" ಚಿತ್ರ ರಾಜ್ಯಾದ್ಯಂತ ಯಶಸ್ಸಿನ ಅಲೆಯಲ್ಲಿ ತೇಲುತ್ತಿದೆ. ಇದೇ ಸಂದರ್ಭದಲ್ಲಿ "ಬಿಂಗೊ" ಚಿತ್ರ ಕೂಡ 25 ದಿನಗಳನ್ನು ಪೂರೈಸಿದೆ. ಕಂಟೆಂಟ್ ಚೆನ್ನಾಗಿರುವ ಚಿತ್ರಗಳನ್ನು ಕನ್ನಡಿಗರು ಕೈ ಬಿಡುವಿದಿಲ್ಲ ಎಂಬ ಮಾತು ಸಾಬೀತಾಗಿದೆ ಎಂದು ನಿರ್ದೇಶಕ ಶಂಕರ್ ಕೋನಮಾನಹಳ್ಳಿ ತಿಳಿಸಿದ್ದಾರೆ. ಆರ್.ಕೆ ಸ್ಟುಡಿಯೋಸ್ ಮತ್ತು ಮುತರಾ ವೆಂಚರ್ಸ್ ಲಾಂಛನದಲ್ಲಿ ಲಲಿತಾಸ್ವಾಮಿ ಮತ್ತು ಆರ್. ಪರಾಂಕುಶ ನಿರ್ಮಾಣ ಮಾಡಿದ್ದಾರೆ. ಆರ್ ಕೆ ಚಂದನ್ ಅವರಿಗೆ ನಾಯಕಿಯಾಗಿ ರಕ್ಷಾ ನಟಿಸಿದ್ದಾರೆ.

'ಕಿಂಗ್' ಚಿತ್ರದ ಪವರ್‌ಫುಲ್ ಹೊಸ ಪೋಸ್ಟರ್ ರಿವೀಲ್ ಮಾಡಿದ ಶಾರುಖ್ ಖಾನ್

'ಕಿಂಗ್' ಸಿನಿಮಾದ ಪವರ್‌ಫುಲ್ ಹೊಸ ಪೋಸ್ಟರ್ ಬಿಡುಗಡೆ ಮಾಡುವ ಮೂಲಕ ಶಾರುಖ್ ಖಾನ್ ನಿರೀಕ್ಷೆಯ ಕಾವು ಹೆಚ್ಚಿಸಿದ್ದಾರೆ. ತುಟಿಗಳ ನಡುವೆ ಗುಲಾಬಿ ಹಾಗೂ ಕಣ್ಣುಗಳಲ್ಲಿ ರೋಷದ ಬೆಂಕಿ ಹೊತ್ತಿಸಿಕೊಂಡಿರುವ ಶಾರುಖ್ ಅವರ ಈ ವಿಭಿನ್ನ ಲುಕ್, ಬಹುನಿರೀಕ್ಷಿತ ಆಕ್ಷನ್ ಎಂಟರ್‌ಟೈನರ್ 'ಕಿಂಗ್' ಚಿತ್ರದಲ್ಲಿನ ಅವರ ರಗಡ್ ಅವತಾರವನ್ನು ಅನಾವರಣಗೊಳಿಸಿದೆ. ಈ ಹೊಸ ಪೋಸ್ಟರ್ 'ಕಿಂಗ್' ಚಿತ್ರದ ಲಾರ್ಜರ್–ದ್ಯಾನ್–ಲೈಫ್ ವೈಭವವನ್ನು ಕಟ್ಟಿಕೊಟ್ಟಿದ್ದು, ಬೆಳ್ಳಿತೆರೆಯ ಮೇಲೆ ಸೂಪರ್‌ಸ್ಟಾರ್ ಶಾರುಖ್ ಅವರನ್ನು ಈ ರೋಚಕ ಅವತಾರದಲ್ಲಿ ಕಣ್ತುಂಬಿಕೊಳ್ಳಲು ಕಾತರದಿಂದ ಕಾಯುತ್ತಿರುವ ಅಭಿಮಾನಿಗಳಿಗೆ ಮತ್ತೊಂದು ಬಲವಾದ ಕಾರಣ ನೀಡಿದೆ. ಸಿದ್ಧಾರ್ಥ್ ಆನಂದ್ ನಿರ್ದೇಶನದ, ರೆಡ್ ಚಿಲ್ಲೀಸ್ ಎಂಟರ್‌ಟೈನ್‌ಮೆಂಟ್ ಮತ್ತು ಮಾರ್ಫ್ಲಿಕ್ಸ್ ಪಿಕ್ಚರ್ಸ್ ನಿರ್ಮಾಣದ 'ಕಿಂಗ್' ಚಿತ್ರವು 2026ರ ಡಿ.24ರಂದು ವಿಶ್ವದಾದ್ಯಂತ ಚಿತ್ರಮಂದಿರಗಳಲ್ಲಿ ಅಬ್ಬರಿಸಲಿದೆ.

ಸಿನಿಲೋಕದ ಧ್ರುವತಾರೆ ಟಿ ಜಿ ಲಿಂಗಪ್ಪ..

ಕನ್ನಡ, ತಮಿಳು, ತೆಲುಗು ಭಾಷೆಗಳಲ್ಲಿ ಹೆಸರಾಂತಕಲಾವಿದರ, ನಿರ್ದೇಶಕರ ಚಿತ್ರಗಳಲ್ಲಿ ಗಾಯಕನಾಗಿ, ರಾಗ ಸಂಯೋಜಕರಾಗಿ ಸಂಗೀತ ನಿರ್ದೇಶಕರಾಗಿ ಸೇವೆ ಸಲ್ಲಿಸಿ ಯಶಸ್ವಿಯಾದವರು ಟಿ ಜಿ ಲಿಂಗಪ್ಪನವರು. 1951ರಲ್ಲಿ 'ಮೋಹನ ಸುಂದರಂ' ತಮಿಳು ಚಿತ್ರದ ಮೂಲಕ ಸಂಗೀತ ನಿರ್ದೇಶಕರಾದರು. ಟಿ.ಜಿ.ಲಿಂಗಪ್ಪ ತಮಿಳು ಚಿತ್ರಗಳಲ್ಲಿ ಬ್ಯುಸಿಯಾಗಿದ್ದಾಗಲೇ ಒಂದೆರಡು ಕನ್ನಡ ಚಿತ್ರಗಳಿಗೆ ಸಂಗೀತ ನೀಡುತ್ತಾ ಬಂದರು. ಆದರೆ ಅಣ್ಣಾವ್ರ ಚಿತ್ರಗಳಿಗೆ ಸಂಗೀತ ನೀಡಲು ಶುರು ಮಾಡಿದ ಮೇಲೆ ಅನೇಕ ಕನ್ನಡ ಚಿತ್ರಗಳಿಗೆ ಸಂಗೀತ ನೀಡಿ ಜನಮನ್ನಣೆ ಗಳಿಸಿದರು. ದೇವರಕಣ್ಣು, ಹೊಸಿಲು ಮೆಟ್ಟಿದ ಹೆಣ್ಣು, ಕಾಲೇಜುರಂಗ, ಬಭ್ರುವಾಹನ, ಲಕ್ಷ್ಮಿ ನಿವಾಸ, ಒಂದು ಪ್ರೇಮದಕಥೆ, ವೀರ ಸಿಂಧೂರ ಲಕ್ಷ್ಮಣ, ಕುದುರೆ ಮುಖ, ತಾಯಿಗೆ ತಕ್ಕ ಮಗ, ಮಧುಚಂದ್ರ, ಭಕ್ತ ಸಿರಿಯಾಳ, ಭಾಗ್ಯವಂತ, ಹಾಸ್ಯರತ್ನ ರಾಮಕೃಷ್ಣ, ಭಕ್ತ ಪ್ರಹ್ಲಾದ, ಗೆಲುವು ನನ್ನದೇ, ಅದೇಕಣ್ಣು, ಶಿವ ಕೊಟ್ಟ ಸೌಭಾಗ್ಯ, ಶ್ರುತಿ ಸೇರಿದಾಗ, ಶಿವ ಮೆಚ್ಚಿದ ಕಣ್ಣಪ್ಪ ಮುಂತಾದ ಅನೇಕ ಕನ್ನಡ ಚಿತ್ರಗಳಿಗೆ ಸಂಗೀತ ನೀಡಿ ಹೆಸರುವಾಸಿಯಾಗಿದ್ದಾರೆ. ಒಂದು ಸಮಯದಲ್ಲಿ ಗಿಟರ್ ವಾದಕರಾಗಿ ಮೇಲುಗೈ ಸಾಧಿಸಿದ ಟಿ ಜಿ ಲಿಂಗಪ್ಪ ಸಂಯೋಜಿಸುತ್ತಿದ್ದ ರಾಗಗಳೇ ಅದ್ಭುತವಾಗಿದ್ದವು. ಇಂದು ಅವರ ಮಗ ಕಿಶೋರ್ ಲಿಂಗಪ್ಪ ಕೂಡ ಗಿಟರ್ ವಾದಕರಾಗಿರುವುದು ವಿಶೇಷ. ತಿರುಚ್ಚಿಯಲ್ಲಿ ವಾಸವಾಗಿದ್ದ ಜಿ. ಗೋವಿಂದರಾಜುಲು ನಾಯ್ಡು ಮತ್ತು ಗೌರಿ ದಂಪತಿಗಳಿಗೆ 1927ರ ಅಗೋಸ್ಟು 22ರಂದು ಲಿಂಗಪ್ಪನವರು ಎರಡನೇ ಮಗನಾಗಿ ಜನಿಸಿದರು. ಜಿ. ಗೋವಿಂದ ರಾಜುಲು ನಾಟಕಗಳಲ್ಲಿ ಹಾರ್ಮೋನಿಯಂ ವಾದಕರಾಗಿದ್ದುಕೊಂಡು ಇತರರಿಗೂ ಸಂಗೀತ ಕಲಿಸುತ್ತಾ, ಸಂಗೀತ ಉಪಕರಣಗಳನ್ನು ಮಾರಾಟ ಮಾಡುತ್ತಾ ನಂತರದ ದಿನಗಳಲ್ಲಿ ತನ್ನ ಕುಟುಂಬವನ್ನು ಮದ್ರಾಸ್‌ಗೆ ಕರೆದುಕೊಂಡು ಹೋದರು. ಬಾಲ್ಯದಲ್ಲೇ ಕಲಾಮಾಧ್ಯಮದ ಮೇಲೆ ಇದ್ದ ಅಪಾರ ಅಭಿಮಾನದಿಂದ, ತನ್ನ 14ನೇ ವಯಸ್ಸಿನಲ್ಲಿಯೇ ಲಿಂಗಪ್ಪನವರು ವಿಶ್ವನಾಥನ್ ನಿರ್ಮಿಸಿದ 'ಕಾಮತೇನು' ಚಿತ್ರದಲ್ಲಿ ನಟಿಸಲು ಪ್ರಯತ್ನಿಸಿದರು. ಆದರೆ ವಿಶ್ವನಾಥನ್ ಅವರು ಲಿಂಗಪ್ಪ ಅವರನ್ನು ಹಾಡಲು ಮತ್ತು ಅವಕಾಶ ನೀಡಲು ಸ್ವಲ್ಪ ಸಮಯ ತಮ್ಮ ಬಳಿ ಇರುವಂತೆ ಕೇಳಿಕೊಂಡರು. ಆದರೂ ಅದು ಫಲಪ್ರದವಾಗದಿದ್ದಾಗಅಲ್ಲಿಂದ ತೆರಳಿದರು. ಅವರು ಸಂಗೀತ ವಾದ್ಯಗಳನ್ನು ನುಡಿಸಲು ಸಮರ್ಥರಾಗಿದ್ದರಿಂದ, ನಂತರ ಮಯೂರ ಫಿಲ್ಮ್ ಆರ್ಕೆಸ್ಟ್ರಾವನ್ನು ಸೇರಿಕೊಂಡರು ಮತ್ತು ಹಾರ್ಮೋನಿಯಂ, ಮ್ಯಾಂಡೋಲಿನ್ ಮತ್ತು ಗಿಟಾರ್ ನುಡಿಸಿದರು. ಈ ಆರ್ಕೆಸ್ಟ್ರಾ ಚಲನಚಿತ್ರಗಳಿಗೆ ಮತ್ತು ಗ್ರಾಮಫೋನ್‌ಗೆ ಸಂಗೀತವನ್ನುನುಡಿಸುತ್ತಿತ್ತು. 1941ರಲ್ಲಿ ಅಶೋಕ್ ಕುಮಾರ್ ಅವರಿಗೆ ವಾದ್ಯಗಳನ್ನು ನುಡಿಸುತ್ತಿದ್ದ ಲಿಂಗಪ್ಪನವರು ಸಿ. ರಾಮಚಂದ್ರ ಮತ್ತು ಹಿರಿಯ ಕಲಾವಿದರೊಂದಿಗೆ ಜೆಮಿನಿ ಸ್ಟುಡಿಯೋಸ್‌ನಲ್ಲಿ ತನ್ನ ಅದೃಷ್ಟ ಪರೀಕ್ಷಿಸಲು ಮುಂದಾದಾಗ ಚಿಕ್ಕ ವಯಸ್ಸಿನ ಕಾರಣ ಲಿಂಗಪ್ಪ ಅವರನ್ನು ತಿರಸ್ಕರಿಸಲಾಯಿತು. ಆದರೂ ಹಠಬಿಡದೆ ಲಿಂಗಪ್ಪನವರು ಸಂಗೀತ ನಿರ್ದೇಶಕ ಟಿ.ಎ.ಕಲ್ಯಾಣಂ ಹಾಗೂ ಇನ್ನಿತರ ದಿಗ್ಗಜರ ಬಳಿ ಅವಕಾಶಕ್ಕಾಗಿ ಸುತ್ತಾಡಿದರು. 1945ರಲ್ಲಿ, ಲಿಂಗಪ್ಪ ಪ್ರಗತಿ ಸ್ಟುಡಿಯೋದಲ್ಲಿ ಆರ್. ಸುದರ್ಶನಂ ಅವರ ಅಡಿಯಲ್ಲಿ ಕೆಲಸ ಮಾಡಿದರು. ಮತ್ತು 1945ರಲ್ಲಿ ಶ್ರೀ ವಲ್ಲಿ ಚಿತ್ರದಲ್ಲಿ ವಾದ್ಯಗಳನ್ನು ನುಡಿಸಿದರು. 1947ರಲ್ಲಿ ಎವಿಎಂ ಪ್ರೊಡಕ್ಷನ್ಸ್ 'ನಮ್ ಇರುವರ್' ಚಿತ್ರವನ್ನು ನಿರ್ಮಿಸಿದಾಗ ಲಿಂಗಪ್ಪ ಸಂಗೀತ ವಾದ್ಯಗಳನ್ನು ನುಡಿಸಲು ಕರಕ್ಕುಡಿಗೆ ಹೋಗಿದ್ದರು. ನಂತರ 1948ರಲ್ಲಿ, ಮತ್ತೆ ಮದ್ರಾಸಿಗೆ ಹಿಂದಿರುಗಿ ಲಿಂಗಪ್ಪನವರು ಸಿ. ಆರ್. ಸುಬ್ಬುರಾಮನ್ ಅವರ ಅಡಿಯಲ್ಲಿ ಕೆಲಸ ಮಾಡಿದರು. ವಿಭಿನ್ನ ಹೆಸರಾಂತ ಸಂಗೀತ ನಿರ್ದೇಶಕರ ಅಡಿಯಲ್ಲಿ ಆದ ಈ ಎಲ್ಲಾ ಅನುಭವವು ಸ್ವತಂತ್ರ ಸಂಗೀತಗಾರನಾಗುವ ಕಲ್ಪನೆಯನ್ನು ಹುಟ್ಟುಹಾಕಿತು. ಅವರು ವಿದೇಶದಿಂದ ಆಧುನಿಕ ಉಪಕರಣಗಳನ್ನು ಖರೀದಿಸಲು ಹೋದರು. ವಿಶೇಷವಾಗಿ ಲಂಡನ್ನಲ್ಲಿ ಅವರು ಎಲೆಕ್ಟ್ರಿಕ್ ಗಿಟಾರ್ ಖರೀದಿಸಿದರು. ಸಂಗೀತ ನಿರ್ದೇಶಕರಾದ ಜಿ. ರಾಮನಾಥನ್, ಎಸ್. ವಿ. ವೆಂಕಟ್ರಾಮನ್ ಮತ್ತು ಕೆ. ವಿ. ಮಹದೇವನ್ ತಮ್ಮ ಹಲವಾರು ಹಾಡುಗಳಿಗೆ ಲಿಂಗಪ್ಪನವರನ್ನು ಬಳಸಿಕೊಂಡಿದ್ದರು. ಅಂದಿನಿಂದ ಲಿಂಗಪ್ಪ ಎಲ್ಲ ಪ್ರಮುಖ ಸಂಗೀತ ನಿರ್ದೇಶಕರ ಬಳಿ ಹಲವು ವಾದ್ಯಗಳನ್ನು ನುಡಿಸುತ್ತಿದ್ದರು. ಗಾಯಕ ನಟರಾದ ಎಂ. ಎಂ.ದಂಡಪಾಣಿ ದೇಶಿಕರ್, ಟಿ. ಆರ್. ಮಹಾಲಿಂಗಂ, ಕೆ. ಆರ್. ರಾಮಸ್ವಾಮಿ, ಯು.ಆರ್.ಜೀವರತ್ನಂ, ಮುಂತಾದವರ ಸಂಯೋಜನೆಯಲ್ಲಿ ಸ್ಮರಣೀಯ ಗೀತೆಗಳನ್ನು ಹಾಡಿದರು. ಓ ಆರ್ ಮಹಾಲಿಂಗಂ ಅವರು 1950ರಲ್ಲಿ ನಿರ್ಮಿಸಿದ ಮೊದಲ ಚಿತ್ರ ಮಚ್ಚಾ ರೇಗ್ಯೆ ಚಿತ್ರಕ್ಕೆ ಸಂಗೀತ ನೀಡಿದ್ದ ಸುಬ್ಬುರಾಮನ್ ಹಠಾತ್ತನೆ ನಿಧನರಾದ ಕಾರಣ, ಸುಬ್ಬುರಾಮನ್ ಅವರ ಮ್ಯಾನೇಜರ್ ಆಗಿದ್ದ ಬಿ. ಆರ್. ಪಂತುಲು ಮತ್ತು ಲಿಂಗಪ್ಪನವರು ಆತ್ಮೀಯರಾದ್ದರಿಂದ 'ನಮ್ ಇರುವರ್' ಚಿತ್ರದಲ್ಲಿ ಹತ್ತಿರವಾದ ಟಿ.ಆರ್.ಮಹಾಲಿಂಗಂ 1951ರಲ್ಲಿ ನಿರ್ಮಿಸಿದ 'ಮೋಹನ ಸುಂದರಂ' ಎರಡನೇ ಚಿತ್ರಕ್ಕೆ ಲಿಂಗಪ್ಪ ಅವರಿಗೆ ಸಂಗೀತ ಸಂಯೋಜಿಸುವ ಅವಕಾಶವನ್ನು ನೀಡಿದರು. 'ಮೋಹನ ಸುಂದರಂ'ನಲ್ಲಿ ಹತ್ತಕ್ಕೂ ಹೆಚ್ಚು ಹಾಡುಗಳಿವೆ. ಹಾಡುಗಳ ಯಶಸ್ಸಿಗೆ ಕಾರಣ ಟಿ.ಆರ್. ಮಹಾಲಿಂಗಂ ಮತ್ತು ಲಿಂಗಪ್ಪ ಇಬ್ಬರೂ ಕರ್ನಾಟಕ ಸಂಗೀತವನ್ನು ಬಲ್ಲವರಾದ್ದರಿಂದ ಒಟ್ಟಿಗೆ ಕುಳಿತು ರಾಗಗಳನ್ನು ಚರ್ಚಿಸಿದರು. ಆನಂತರ ಟಿ. ಆರ್. ಮಹಾಲಿಂಗಂ ಅವರು ತಮ್ಮ ಇತರ ಚಿತ್ರಗಳಾದ 'ಚಿನ್ನದುರ್ರೈ' ಮತ್ತು 'ವಿಲಾಯಟ್ಟು ಬೊಮ್ಮಾಯಿ'ಯಲ್ಲಿ ಲಿಂಗಪ್ಪ ಅವರಿಗೆ ಅವಕಾಶವನ್ನಿತ್ತರು. ಬಿ. ಆರ್. ಪಂತುಲು ಟಿ.ಆರ್. ಮಹಾಲಿಂಗಂ ಅವರಿಂದ ಬೇರ್ಪಟ್ಟು ಪದ್ಮಿನಿ ಪಿಕ್ಚರ್ಸನ್ನು ಪ್ರಾರಂಭಿಸಿದರು, ಪದ್ಮಿನಿ ಪಿಕ್ಚರ್ಸ್‌ಗಾಗಿ ಲಿಂಗಪ್ಪನವರು ತಮಿಳಿನಲ್ಲಿ ಹೆಚ್ಚಿನ ಸಂಖ್ಯೆಯ ಚಲನಚಿತ್ರಗಳಿಗೆ ಸಂಗೀತ ನೀಡಿದರು. ತನ್ನ ರಾಗ ಸಂಯೋಜನೆಯಿಂದಲೇ ಯಶಶ್ವಿಯಾಗಿ ಟಿ.ಆರ್. ಮಹಾಲಿಂಗಂ, ಬಿ ಆರ್ ಪಂತುಲು, ಹುಣಸೂರು ಕೃಷ್ಣಮೂರ್ತಿಗಳ ಒಡ ನಾಟಗಳಿಸಿ 'ಬಭ್ರುವಾಹನ' ದಂತಹ ಚಿತ್ರಗಳಿಗೆ ಸಂಗೀತ ನೀಡಿ ಕಲಾ ಪ್ರೇಮಿಗಳ ಹೃದಯದಲ್ಲಿ ಮೆರೆದ ಟಿ ಜಿ ಲಿಂಗಪ್ಪನವರು 2000ನೇ ಫೆಬ್ರವರಿ 5ರಂದು ವಿಧಿವಶರಾದರು. ಇವರು ಕರಾವಳಿ ತರಂಗಿಣಿ ಪತ್ರಿಕೆಯ ಈ ವಾರದ ಸಿನಿ ಲೋಕದ ಧ್ರುವತಾರೆಯಾಗಿದ್ದಾರೆ.




ಎನ್ನಾರ್ ಕೆ ವಿಶ್ವನಾಥ್
ENNAR K VISHWANATH



KARAVALI THARANGINI Weekly Owned, Editor, Published & Printed by Lalithasri Preetham Rai No.2-64/54(12), Pushparaj Nilaya, Jayanagara, 3rd 'A' Maroli Village, Dakshina Kannada, Karnataka - 575005.
email: karavalitharangini@gmail.com, web: karavalitharangini.com ph: 9880109212 Printed at Bhima Samskruthi Printers & Publishers, No 1182 14th Main Road Prakash Nagar, Bengaluru Karnataka-560021